# The Origins and Operations of

# the Indian Education System, 1757-1947

## ಭಾರತೀಯ ಶಿಕ್ಷಣ ಪದ್ಧತಿಯ ಉಗಮ ಮತ್ತು ಕಾರ್ಯಾಚರಣೆ

## 1757-1947

ಈಸ್ಟ್ ಇಂಡಿಯಾ ಕಂಪನಿಯು 1757 ರಲ್ಲಿ ಭಾರತದಲ್ಲಿ ತನ್ನ ರಾಜಕೀಯ ಜೀವನವನ್ನು ಪ್ರಾರಂಭಿಸಿದಾಗ ಇಲ್ಲಿ ಸರ್ಕಾರದಿಂದ ವ್ಯವಸ್ಥೆಗೊಳಿಸಲಾದ ಮತ್ತು ಬೆಂಬಲಿತವಾದ ಯಾವ ಶಿಕ್ಷಣ ಪದ್ಧತಿಯೂ ಇರಲಿಲ್ಲ. ಆದರೆ ಹಿಂದೂಗಳು ಮತ್ತು ಮುಸ್ಲಿಮರು ಇಬ್ಬರೂ ತಮ್ಮದೇ ಆದ ಸ್ವದೇಶಿಯವಾದ ಪದ್ಧತಿಗಳನ್ನು ಹೊಂದಿದ್ದರು. ಆ ಪದ್ಧತಿಗಳು ಕಲಿಕೆ ಮತ್ತು ವಿದ್ವತ್ತಿನ ಮಹಾನ್ ಪರಂಪರೆಯಲ್ಲಿ ಬೇರು ಬಿಟ್ಟಿದ್ದವು. ಆದರೆ ಹತ್ತೊಂಬತ್ತನೆಯ ಶತಮಾನದ ಆರಂಭದ ವರ್ಷಗಳ ಹೊತ್ತಿಗೆ ಉನ್ನತ ಕಲಿಕೆಯ ಈ ಸ್ವದೇಶಿ ಶಾಲೆಗಳು ಮತ್ತು ಹಳ್ಳಿಯ ಪ್ರಾಥಮಿಕ ಶಾಲೆಗಳು ಅವನತಿಯ ಹಂತದಲ್ಲಿದ್ದವು.[1]

ಪ್ಲಾಸಿ ಕದನದ ಅನಂತರ ಬ್ರಿಟಿಷರು ಭಾರತದಲ್ಲಿ ತಮ್ಮ ಸಾಮ್ರಾಜ್ಯವನ್ನು ವಿಸ್ತರಿಸಿಕೊಳ್ಳಲಾರಂಭಿಸಿದರು. ಅನತಿಕಾಲದಲ್ಲಿಯೇ ಸ್ವದೇಶಿ ಭಾರತೀಯ ಸಂಸ್ಥೆಗಳು ಮತ್ತು ಆಚರಣೆಗಳನ್ನು ಕುರಿತು ತಮ್ಮ ನೀತಿ ಮತ್ತು ನಿಲುವು ಏನಾಗಿರಬೇಕು ಎಂಬ ಪ್ರಶ್ನೆ ಅವರಿಗೆ ಎದುರಾಯಿತು. ಇದಕ್ಕೆ ಮೊದಲನೆಯ ಉತ್ತರ ರಾಬರ್ಟ್ ಕ್ಲೈವ್‌ನಿಂದ ಬಂದಿತು. ಈ ವಿಚಾರವಾಗಿ ಸಾಧ್ಯವಾದಷ್ಟೂ ಕಡಿಮೆ ಹಸ್ತಕ್ಷೇಪವಿರಬೇಕು ಎನ್ನುವುದು ಅವನ ನಂಬಿಕೆಯಾಗಿತ್ತು. ಆದ್ದರಿಂದ ಬಂಗಾಳದಲ್ಲಿದ್ದ ಈಸ್ಟ್ ಇಂಡಿಯಾ ಕಂಪನಿಯ ಅಧಿಕಾರಿಗಳ ತತ್ಕ್ಷಣದ ಪ್ರತಿಕ್ರಿಯೆಯೆಂದರೆ ಸ್ವದೇಶಿ ಶಿಕ್ಷಣ ಪದ್ಧತಿಯನ್ನು ಬೆಂಬಲಿಸಬೇಕು ಎನ್ನುವುದೇ ಆಗಿತ್ತು. 1781 ರಲ್ಲಿ ವಾರೆನ್ ಹೇಸ್ಟಿಂಗ್ಸ್ ಕಲ್ಕತ್ತಾ ಮದರಸವನ್ನು ಸ್ಥಾಪಿಸಿದನು. ಸಾಂಪ್ರದಾಯಿಕ ಇಸ್ಲಾಮಿನ ಅಧ್ಯಯನಗಳ ಮಾದರಿಯನ್ನು ಒದಗಿಸುವುದು ಇದರ ಉದ್ದೇಶವಾಗಿತ್ತು. 1792ರಲ್ಲಿ, ಬನಾರಸ್‌ನ ರೆಸಿಡಂಟ್ ಆಗಿದ್ದ ಜೋನಾಥನ್ ಡಂಕನ್ ಬನಾರಸ್ ಸಂಸ್ಕೃತ ಕಾಲೇಜನ್ನು ಸ್ಥಾಪಿಸಿದನು. ದಖ್ಖನ್ನಿನ ಕಮಿಷನರ್ ಆಗಿದ್ದ ಮೌಂಟ್‌ಸ್ಟೂವರ್ಟ್ ಎಲ್ಫಿನ್‌ಸ್ಟೋನ್ ಹಿಂದೂ ಶಿಕ್ಷಣಕ್ಕಾಗಿ ಪೂನಾದಲ್ಲಿ ಒಂದು ಕಾಲೇಜನ್ನು ಸ್ಥಾಪಿಸಿದನು. ದೆಹಲಿ ಜಿಲ್ಲೆಯಲ್ಲಿ, ಜಮೀನ್ದಾರರ ಮಕ್ಕಳಿಗೆ ಪರ್ಷಿಯನ್ ಭಾಷೆಯನ್ನು ಓದುವುದು ಮತ್ತು ಬರೆಯುವುದನ್ನು ಕಲಿಸಲು ಮಿಸ್ಟರ್ ಫ್ರೇಸರ್ ಶಾಲೆಗಳನ್ನು ಸ್ಥಾಪಿಸಿದನು. ಈ ವ್ಯಕ್ತಿಗಳು ಪ್ರಾಯೋಗಿಕ ಪರಿಗಣನೆಗಳಿಂದ ಪ್ರಭಾವಿತರಾಗಿದ್ದರು; ದೇಶವನ್ನು ಆಳುವ ಕಾರ್ಯದಲ್ಲಿ ನೆರವಾಗಲು ಭಾರತೀಯ ಅಧಿಕಾರಿಗಳು ಸಂಸ್ಕೃತ, ಪರ್ಷಿಯನ್ ಮತ್ತು ಅರೇಬಿಕ್ ಭಾಷೆಗಳಲ್ಲಿ ಪಾರಂಗತರಾಗಿರಬೇಕಾದ ಅಗತ್ಯ ಮತ್ತು ಸಾಂಪ್ರದಾಯಿಕ ಹಿಂದೂ ಮತ್ತು ಮುಸ್ಲಿಮ್ ಗಣ್ಯರ ಸದ್ಭಾವನೆಯನ್ನು ಗಳಿಸಿಕೊಳ್ಳುವ ಅಪೇಕ್ಷೆ ಅವರಿಗಿತ್ತು. ಆದರೆ ಅವರಲ್ಲಿ ಕೆಲವರು ಭಾರತೀಯ ಸಾಂಸ್ಕೃತಿಕ ಪರಂಪರೆಯನ್ನು ಕುರಿತು ಪ್ರಾಮಾಣಿಕವಾದ ಮೆಚ್ಚುಗೆ ಹೊಂದಿದ್ದರು, ಸ್ಫೂರ್ತಿಯನ್ನೂ ಪಡೆದಿದ್ದರು. ಇದು ಸರ್ ವಿಲಿಯಮ್ ಜೋನ್ಸ್‌ನ ಪೌರಸ್ತ್ಯ ವಿದ್ವತ್ತು ಮತ್ತು ರಾಯಲ್ ಏಷ್ಯಾಟಿಕ್ ಸೊಸೈಟಿಯ ರಚನೆಗೊಂಡ ದಶಕವಾಗಿತ್ತು.

ಪೌರಸ್ತ್ಯ ಶಿಕ್ಷಣವನ್ನು ಪ್ರೋತ್ಸಾಹಿಸುವ ಈ ಪ್ರಾರಂಭದ ಹಂತದ ನೀತಿಯನ್ನು, ಅನತಿಕಾಲದಲ್ಲಿಯೇ ಇಂಗ್ಲೆಂಡಿನಲ್ಲಿ ಪ್ರಶ್ನಿಸಲಾಯಿತು; ಈ ಸವಾಲು ಮೂರು

ಗುಂಪುಗಳಿಂದ ಬಂದಿತು: ಈವ್ಯಾಂಜೆಲಿಕಲ್ಸ್, ಲಿಬರಲ್ಸ್ ಮತ್ತು ಯೂಟಿಲಿಟೇರಿಯನ್ಸ್ (ಸುವಾರ್ತೆಯವರು, ಉದಾರವಾದಿಗಳು ಮತ್ತು ಪ್ರಯೋಜನವಾದಿಗಳು). ಅದೃಷ್ಟವಶಾತ್, ಆ ಕಾಲದ ಈ ಮೂರು ದೃಷ್ಟಿಕೋನಗಳ ಪ್ರತಿಪಾದಕರ ಮುಂಚೂಣಿಯ ಗುಂಪಿನಲ್ಲಿ, ಭಾರತದ ಬಗೆಗೆ ಕಾಳಜಿ ಇದ್ದವರು ಹೆಚ್ಚಿನ ಸಂಖ್ಯೆಯಲ್ಲಿದ್ದರು. ಈ ಗುಂಪುಗಳ ನಡುವೆ ಅಸಂಖ್ಯಾತ ಭಿನ್ನಾಭಿಪ್ರಾಯಗಳಿದ್ದರೂ, ಭಾರತೀಯ ಸಮಾಜವನ್ನು ಆಮೂಲಾಗ್ರವಾಗಿ ರೂಪಾಂತರಿಸಬೇಕು ಎಂಬ ವಿಷಯದಲ್ಲಿ ಅವರೆಲ್ಲ ಸಹಮತವನ್ನು ಹೊಂದಿದ್ದರು. ಬನಾರಸ್‌ನಲ್ಲಿ ಸಂಸ್ಕೃತ ಕಾಲೇಜನ್ನು ಸ್ಥಾಪಿಸಬೇಕೆಂದು ಡಂಕನ್ ಯೋಚನೆ ಮಾಡುತ್ತಿದ್ದ ವರ್ಷದಲ್ಲಿಯೇ, ಲಂಡನ್ ಮತ್ತು ಕಲ್ಕತ್ತಾ ನಗರಗಳಲ್ಲಿ ಈಸ್ಟ್ ಇಂಡಿಯಾ ಕಂಪನಿಯ ಆಡಳಿತದಲ್ಲಿ ತೊಡಗಿಕೊಂಡಿದ್ದ ಚಾರ್ಲ್ಸ್ ಗ್ರ್ಯಾಂಟ್ ಒಂದು ವಿಭಿನ್ನ ಬಗೆಯ ಶಿಕ್ಷಣಕ್ಕಾಗಿ ಪ್ರತಿಪಾದಿಸುತ್ತಿದ್ದ.[2] ಹಿಂದೂ ಸಮಾಜವನ್ನು ಪುನರುಜ್ಜೀವನಗೊಳಿಸುವುದು ಬ್ರಿಟನ್ನಿನ ಅಭಿಯಾನವಾಗಿತ್ತು ಮತ್ತು "ಬ್ರಿಟನ್ ಅದನ್ನು ಇಂಗ್ಲಿಷ್ ಭಾಷೆಯ ಮೂಲಕ ಮಾಡಬೇಕು" ಎಂದು ಅವನು ನಂಬಿದ್ದ. "ಹಿಂದೂಗಳು ಅಜ್ಞಾನಿಗಳಾದ ಕಾರಣ ತಪ್ಪು ಮಾಡುತ್ತಿದ್ದಾರೆ. ಕ್ರೈಸ್ತಧರ್ಮ ಮತ್ತು ಯೂರೋಪಿನ ಕಲೆ ಹಾಗೂ ವಿಜ್ಞಾನಗಳನ್ನು ಪರಿಚಯಿಸುವ ಮೂಲಕ ಈ ಅಂಧಕಾರವನ್ನು ತೊಲಗಿಸಬಹುದು" ಎಂಬುದು ಅವನ ವಿಚಾರವಾಗಿತ್ತು. ಭಾರತದಲ್ಲಿ ಹೆಚ್ಚು ಇತ್ಯಾತ್ಮಕವಾದ ಒಂದು ಶಿಕ್ಷಣ ನೀತಿಯನ್ನು ಅಳವಡಿಸಿಕೊಳ್ಳಲು, ಗ್ರ್ಯಾಂಟ್‌ನ ಪ್ರಕರಣಗ್ರಂಥವು[3] (treatise) ಕಂಪನಿಯ ಮೇಲೆ ಈವ್ಯಾಂಜೆಲಿಕಲ್ ಒತ್ತಡದ ಪ್ರಾರಂಭವಾಗಿತ್ತು. ವಿಲಿಯಂ ವಿಲ್ಬರ್‌ಫೋರ್ಸ್ ಒಬ್ಬ ಸದಸ್ಯನಾಗಿದ್ದ ಹಾಗೂ ಗ್ರಾ್ರಯಂಟ್ ಮತ್ತು ಇತರ ಸದಸ್ಯರ ಕ್ಲ್ಯಾಪಮ್ ಪಂಗಡ[4] ಕ್ರೈಸ್ತ ಧರ್ಮವನ್ನು ಪ್ರಸಾರಮಾಡುವ ಒಂದು ಸಾಧನವಾಗಿ ಇಂಗ್ಲೀಷನ್ನು ಪರಿಚಯಿಸಬೇಕು ಎಂದು ಕಂಪನಿಗೆ ಒತ್ತಾಯಿಸಿತು. ಅವರ ಬರವಣಿಗೆಗಳಲ್ಲಿ ಪಶ್ಚಿಮದಲ್ಲಾದಂತೆ ಭಾರತದಲ್ಲಿಯೂ ಕೂಡ ಧಾರ್ಮಿಕ ಸುಧಾರಣೆಯು ಆರ್ಥಿಕ ಮತ್ತು ರಾಜಕೀಯ ಪುನರುಜ್ಜೀವನವನ್ನು ತರಬಹುದು ಎಂಬ ಒಳಧ್ವನಿ ಇರುತ್ತಿತ್ತು. ಮುಕ್ತ ವ್ಯಾಪಾರಿಗಳು (free traders) ಅನತಿ ಕಾಲದಲ್ಲಿಯೇ ಅವರೊಡನೆ ಕೈ ಜೋಡಿಸಿದರು. ಆಂಗ್ಲೀಕರಣಗೊಂಡ ಭಾರತೀಯರು ಬ್ರಿಟಿಷ್ ಸರಕುಗಳಿಗೆ ಸಂಭವನೀಯ ಗ್ರಾಹಕರಾಗಬಹುದು ಎನ್ನುವುದು ಅವರ ನಿರೀಕ್ಷೆಯಾಗಿತ್ತು. ಮೆಕಾಲೆಯಂತಹ ಉದಾರವಾದಿಗಳು ಪಾಶ್ಚಿಮಾತ್ಯ ಶಿಕ್ಷಣದ ಶ್ರೇಷ್ಠತೆಯ ಬಗೆಗೆ ದೃಢವಾದ ನಂಬಿಕೆಯನ್ನು ಹೊಂದಿದ್ದರು. ಈವ್ಯಾಂಜೆಲಿಕಲ್ ಮತ್ತು ಉದಾರವಾದಿಗಳ ಒತ್ತಡದೊಡನೆ ಪ್ರಯೋಜನವಾದಿಗಳದ್ದೂ ಸೇರಿತು. 1817 ರಲ್ಲಿ ಜೇಮ್ಸ್ ಮಿಲ್ ತನ್ನ ಹಿಸ್ಟರಿ ಆಫ್ ಬ್ರಿಟಿಷ್ ಇಂಡಿಯಾ ಎಂಬ ಪುಸ್ತಕವನ್ನು ಪ್ರಕಟಿಸಿದನು. ಅದು ಭಾರತದ ಸಮಾಜದ ದೋಷಗಳ ಒಂದು ಮರ್ಮಭೇದಕ ವಿಶ್ಲೇಷಣೆಯಾಗಿತ್ತು. ಮಿಲ್ ಪೌರಸ್ತ್ಯ ಶಿಕ್ಷಣಕ್ಕೆ ವಿರುದ್ಧವಾಗಿ ಇಂಗ್ಲಿಷ್ ಅನ್ನು ಬೆಂಬಲಿಸುವವನಾಗಿದ್ದ. ಈವ್ಯಾಂಜೆಲಿಕಲ್ ಬಣ ಮತ್ತು ಉದಾರವಾದಿಗಳು ನಂಬಿದಂತೆ, ಭಾರತದ ಎಲ್ಲ ಕೇಡುಗಳಿಗೆ ಶಿಕ್ಷಣವೊಂದೇ ರಾಮಬಾಣ ಎಂದು ಅವನು ನಂಬಿರಲಿಲ್ಲ. ಶಾಸನ ಮಾಡುವುದರಲ್ಲಿ ಮತ್ತು ವ್ಯಾಪಕವಾದ ಆಡಳಿತಾತ್ಮಕ ಸುಧಾರಣೆಗಳಲ್ಲಿ ಜೇಮ್ಸ್ ಮಿಲ್ ಹೆಚ್ಚಿನ ಶ್ರದ್ಧೆಯನ್ನು ಇಟ್ಟುಕೊಂಡಿದ್ದನು.[5] 1819ರಲ್ಲಿ ಮಿಲ್‌ನನ್ನು ಈಸ್ಟ್ ಇಂಡಿಯಾ ಕಂಪನಿಯಲ್ಲಿ ಸಹಾಯಕ ಪರೀಕ್ಷಕನಾಗಿ ನೇಮಿಸಲಾಯಿತು. ಹೀಗೆ ಅವನು ತನ್ನ ವಿಚಾರಗಳನ್ನು ಇಂಡಿಯಾ ಹೌಸ್‌ಗೆ ಕೊಂಡೊಯ್ದನು. ಮಿಲ್ ಬರೆದ ನಿರ್ದೇಶಕರ ಮಂಡಳಿಯ ಲಿಖಿತ ಸಮಾಚಾರಗಳು, ಪೌರಸ್ತ್ಯ ಸಂಸ್ಥೆಗಳಿಗೆ ಬೆಂಬಲ ಕೊಡಬೇಕೆಂಬ ಯೋಜನೆಯನ್ನು ಅವು "ಆರಂಭದಿಂದ ಮತ್ತು ಮೂಲದಿಂದ ದೋಷಯುಕ್ತವಾದುದಾಗಿವೆ" ಎಂದು ಖಂಡಿಸಲು ಆರಂಭಿಸಿದವು. ಶಿಕ್ಷಣದ ಗುರಿಯು ಉಪಯುಕ್ತ ಕಲಿಕೆಯನ್ನು ಪ್ರೋತ್ಸಾಹಿಸುವುದೇ ವಿನಾ ಮಿಲ್ ವಿವರಿಸಿದಂತೆ "ಅರ್ಥವಾಗದ ಮತ್ತು ನಿಷ್ಪ್ರಯೋಜಕವಾದ ಜ್ಞಾನ"ವನ್ನು ಪ್ರೋತ್ಸಾಹಿಸುವುದಲ್ಲ.[6] 1823 ರಲ್ಲಿ ಜಾನ್‌ಸ್ಟೂವರ್ಟ್ ಮಿಲ್‌ನನ್ನು ಇಂಡಿಯಾ ಹೌಸ್‌ನಲ್ಲಿ ಪರೀಕ್ಷಕರ ಕಚೇರಿಯಲ್ಲಿ ಸಹಾಯಕ ಗುಮಾಸ್ತನಾಗಿ ನೇಮಿಸುವ ಮೂಲಕ ಪ್ರಯೋಜನವಾದಿಗಳ ಪ್ರಭಾವವನ್ನು ಮತ್ತಷ್ಟು ಬಲಪಡಿಸಲಾಯಿತು.

ಭಾರತೀಯ ಪ್ರಜೆಗಳ ಮೇಲೆ ಪಾಶ್ಚಾತ್ಯೀಕೃತ ಶಿಕ್ಷಣ ಪದ್ಧತಿಯನ್ನು ಹೇರುವುದು ಈಸ್ಟ್ ಇಂಡಿಯಾ ಕಂಪನಿಯ ಮೂಲ ನೀತಿಯ ಒಂದು ಭಾಗವಾಗಿರಲಿಲ್ಲ. ಶಿಕ್ಷಣದಲ್ಲಿ ವಿಚಾರದಲ್ಲಿ ಅದರ ನಿರಾಸಕ್ತಿ ಆಶ್ಚರ್ಯವೇನಾಗಿರಲಿಲ್ಲ. ಏಕೆಂದರೆ ಅದರ ಮೊದಲ ಉದ್ದೇಶ ವ್ಯಾಪಾರವಾಗಿತ್ತು. ಸಾಮಾಜಿಕ ಮತ್ತು ಧಾರ್ಮಿಕ ಸಂಸ್ಥೆಗಳಲ್ಲಿ ಹಸ್ತಕ್ಷೇಪ ಮಾಡುವುದು ಯಾವುದೇ ರೀತಿಯಲ್ಲೂ ಅದರ ಆಶಯವಾಗಿರಲಿಲ್ಲ. 1789ನೇ ಇಸವಿಯ ಫ್ರೆಂಚ್ ಕ್ರಾಂತಿಯು ಬ್ರಿಟನ್ನಿನಲ್ಲಿ ಇಂತಹದೊಂದು ಸಂಪ್ರದಾಯವಾದಿ ಪ್ರತಿಕ್ರಿಯೆಯನ್ನು ಉಂಟುಮಾಡಿತ್ತು. ಅಲ್ಲದೆ, ಇಂಗ್ಲೆಂಡಿನಲ್ಲಿ ಈ ಕಾಲಘಟ್ಟದಲ್ಲಿ ಶಿಕ್ಷಣವು ಮುಖ್ಯವಾಗಿ ಕುಟುಂಬ ಮತ್ತು ಚರ್ಚ್ನ ಕಾರ್ಯಭಾರವಾಗಿತ್ತೇ ವಿನಾ ಸರ್ಕಾರದ್ದಾಗಿರಲಿಲ್ಲ. ಹತ್ತೊಂಬತ್ತನೆಯ ಶತಮಾನದಲ್ಲಿ ಬಹುತೇಕ ಯುರೋಪಿಯನ್ ಸರ್ಕಾರಗಳು ಶಿಕ್ಷಣಕ್ಕೆ ಆರ್ಥಿಕ ನೆರವನ್ನು ಒದಗಿಸುತ್ತಿದ್ದರೂ, ಶ್ರೀಮಂತ ದೇಶವಾಗಿದ್ದ ಇಂಗ್ಲೆಂಡ್ ಕಾರ್ಯಶೀಲವಾಗುವುದರಲ್ಲಿ ಅತ್ಯಂತ ನಿಧಾನಗತಿಯಲ್ಲಿತ್ತು.

1813 ರಲ್ಲಿ ಮುಖ್ಯವಾಗಿ ಚಾರ್ಲ್ಸ್ ಗ್ರ್ಯಾಂಟ್, ವಿಲಿಯಮ್ ವಿಲ್ಬರ್ ಫೋರ್ಸ್ ಮತ್ತು ಕ್ಲ್ಯಾಪಮ್ ಪಂಗಡದ ಪಾರ್ಲಿಮೆಂಟಿಗೆ ಸೇರಿದ ಇತರ ಸದಸ್ಯರ ಪ್ರಭಾವದ ಅಡಿಯಲ್ಲಿ ಕಂಪನಿಯ ಸನ್ನದಿನಲ್ಲಿ ಒಂದು ಖಂಡವನ್ನು ಸೇರಿಸಲಾಯಿತು. ಅದರಲ್ಲಿ ಗವರ್ನರ್ ಜನರಲ್ ಇನ್ ಕೌನ್ಸಿಲ್ "ಕಡ್ಡಾಯವಾಗಿ ಅಲ್ಲದಿದ್ದರೂ ಕಾನೂನಾತ್ಮಕವಾಗಿ" ಶಿಕ್ಷಣಕ್ಕಾಗಿ ಒಂದು ಲಕ್ಷ ರೂಪಾಯಿಗೆ ಕಡಮೆ ಇಲ್ಲದಂತೆ ನಿಧಿಯನ್ನು ತೆಗೆದಿರಿಸಬೇಕು ಎಂದು ಗೊತ್ತುಪಡಿಸಿದರು. ಇದನ್ನು "ಸಾಹಿತ್ಯದ ಪುನರುಜ್ಜೀವನ ಮತ್ತು ಸುಧಾರಣೆಗಾಗಿ ಮತ್ತು ಭಾರತದ ಸ್ಥಳೀಯ ವಿದ್ವಾಂಸರಿಗೆ ಉತ್ತೇಜನ ನೀಡುವುದಕ್ಕಾಗಿ ವೆಚ್ಚ ಮಾಡಬೇಕು" ಮತ್ತು "ನಿವಾಸಿಗಳಿಗೆ ವೈಜ್ಞಾನಿಕ ಜ್ಞಾನವನ್ನು ಪರಿಚಯಿಸಲು ಹಾಗೂ ಪ್ರೋತ್ಸಾಹಿಸಲು" ವೆಚ್ಚ ಮಾಡಬೇಕು.[7] ಆದರೆ ಈ ಒಂದು ಲಕ್ಷ ರೂಪಾಯಿಗಳನ್ನು ಹೇಗೆ ಖರ್ಚು ಮಾಡಬೇಕು ಎಂಬುದಕ್ಕೆ ಸ್ಪಷ್ಟವಾದ ಯಾವ ನಿರ್ದೇಶನವೂ ಇರಲಿಲ್ಲ. ನಿರ್ದೇಶಕರ ಮಂಡಲಿಯು ಈ ಖಂಡವನ್ನು ಸೇರಿಸಲು ಪ್ರಾರಂಭದಲ್ಲಿ ವಿರೋಧಿಸಿತ್ತು. ಆದರೆ ಹಾಗೆ ಮಾಡುವುದು ಅವರಿಗೆ ಅನಿವಾರ್ಯವಾಗಿತ್ತು. ಏಕೆಂದರೆ ಕಂಪನಿಯ ಸರ್ಕಾರದ ಮೇಲೆ ಆರ್ಥಿಕವಾಗಿ ಅವಲಂಬಿಸುವುದು ಹೆಚ್ಚಾಗುತ್ತಲೇ ಇತ್ತು. ಭಾಗಶಃ ಸುಧಾರಣೆಗಾಗಿ ಈವ್ಯಾಂಜೆಲಿಕಲ್ ಉತ್ಸಾಹದಿಂದ, ಮತ್ತು ಭಾಗಶಃ ನೇತ್ಯಾತ್ಮಕ ಪ್ರವೃತ್ತಿ ಸಲ್ಲದೆಂಬ ಕಂಪನಿಯ ಭಾವನೆಯಿಂದ ಸ್ಫೂರ್ತಿಗೊಂಡ ಈ ಖಂಡವು ಒಂದು ರಾಜಿಯಾಗಿತ್ತು. ಇದಕ್ಕೆ ಮಧ್ಯಮ ಮಾರ್ಗವನ್ನು ದಿನಾಂಕ 06-03-1811 ರ ಮಿಂಟೊ ಅವರ ನಡಾವಳಿಯಲ್ಲಿ ಸೂಚಿಸಲಾಗಿದೆ. ಅದರಲ್ಲಿ ಅವರು ವಿದ್ವತ್ತಿಗೆ ಸರ್ಕಾರದ ಪೋಷಣೆ ನೀಡುವ ಭಾರತೀಯ ಸಂಪ್ರದಾಯವನ್ನು ಒತ್ತಿಹೇಳಿದ್ದಾರೆ. ಅಂತಹ ಪೋಷಣೆಯನ್ನು ಪುನರುಜ್ಜೀವಿಸಬಹುದು ಎಂದು ಅವರು ಸಲಹೆ ನೀಡಿದ್ದಾರೆ.[8] ಪ್ರಾರಂಭದಲ್ಲಿ ಕಂಪನಿಯು ಸಂಸ್ಕೃತ ಮತ್ತು ಅರೇಬಿಕ್ ಅಧ್ಯಯನವನ್ನು ಪೋಷಿಸುವ ನೀತಿಯನ್ನು ಹಾಗೆಯೇ ಮುಂದುವರಿಸಿತು. 1823ರ ವರೆಗೂ ಅದು ಶಾಲೆಗಳ ಸ್ಥಾಪನೆಗಿಂತ ಯುದ್ಧಗಳು, ಒಡಂಬಡಿಕೆಗಳು ಮತ್ತು ಸಾಲಗಳ ಇತ್ಯರ್ಥಗಳಲ್ಲಿ ಹೆಚ್ಚು ಆಸಕ್ತವಾಗಿದ್ದರಿಂದ ಶಿಕ್ಷಣಕ್ಕೆ ಹೆಚ್ಚಿನದೇನನ್ನೂ ಮಾಡಲಿಲ್ಲ.

ದೇಶಿಯ ಶಿಕ್ಷಣವನ್ನು ಮೀರಿ ಯಾವುದೇ ರೂಪದ ಶಿಕ್ಷಣವನ್ನು ಪರಿಚಯಿಸುವ ಪ್ರಯತ್ನಗಳು ಮೊಟ್ಟಮೊದಲು ಹೊರಹೊಮ್ಮಿದ್ದು ಧರ್ಮಪ್ರಚಾರಕರಿಂದ. ತಂಜಾವೂರು, ರಾಮನಾಥ್ ಮತ್ತು ಶಿವಗಂಗೆಗಳಲ್ಲಿ 1770 ರ ದಶಕ ಮತ್ತು 1780 ರ ದಶಕಗಳಲ್ಲಿದ್ದ ಶ್ವಾರ್ಟ್ಜ್ (Schwartz's) ಶಾಲೆಗಳು ಭಾರತೀಯ ಕ್ರೈಸ್ತರಿಗೆ ಇಂಗ್ಲಿಷ್ ಕಲಿಸುವ ಮೊದಲ ಪ್ರಯತ್ನಗಳಾಗಿದ್ದವು. ಕೇರಂಡರ್ (Kierander) ಕಡಲೂರಿನಲ್ಲಿ ಒಂದು ಶಾಲೆಯನ್ನು ಪ್ರಾರಂಭಿಸಿದನು. ಬ್ಯಾಪ್ಟಿಸ್ಟ್ ಧರ್ಮ ಪ್ರಚಾರಕರಾದ ಕ್ಯಾರೆ, ಮಾರ್ಷ್ಮನ್ ಮತ್ತು ವಾರ್ಡ್ ಅವರು ಸೆರಾಮ್‌ಪುರದಲ್ಲಿ, ಲಂಡನ್ ಮಿಷನ್ ಸೊಸೈಟಿ ಹಾಗೂ ಅಮೇರಿಕನ್ ಮೆಥಾಡಿಸ್ಟ್ಸ್ ಬಾಂಬೆಯಲ್ಲಿ ಪಥ ಪ್ರವರ್ತಕ ಕಾರ್ಯವನ್ನು ಮಾಡಿದರು. ಆದರೆ ಈ ಎಲ್ಲಾ

ಅಭಿಯಾನಗಳು ಚಿಕ್ಕ ಪ್ರಯತ್ನಗಳಾಗಿದ್ದವು. 1800 ರಲ್ಲಿ ಮಿಷನ್ ಶಾಲೆಗಳಲ್ಲಿ ಒಂದು ಸಾವಿರಕ್ಕಿಂತ ಹೆಚ್ಚು ಮಕ್ಕಳು ಶಿಕ್ಷಣವನ್ನು ಪಡೆಯುತ್ತಿದ್ದರೇ ಎನ್ನುವುದು ಅನುಮಾನ.[9]

ಕಲ್ಕತ್ತ ಮತ್ತು ಬಾಂಬೆಯ ಶ್ರೀಮಂತ ನಾಗರಿಕರು ಈ ಮಧ್ಯೆ ಇಂಗ್ಲಿಷ್ ಶಾಲೆಗಳನ್ನು ಸ್ಥಾಪಿಸಲು ಮುಂದೆ ಬಂದರು. ಅವರು ಕಲ್ಕತ್ತಾ ಮತ್ತು ಬಾಂಬೆಗಳಲ್ಲಿ ದೇಶೀಯ ಶಾಲೆ ಮತ್ತು ಪುಸ್ತಕ ಸಂಘಗಳನ್ನು (ಬುಕ್ ಸೊಸೈಟಿ) ಸ್ಥಾಪಿಸುವಲ್ಲಿ ಅಧಿಕೃತ ಮತ್ತು ಅನಧಿಕೃತ ಇಂಗ್ಲಿಷ್ ಜನರೊಡನೆ ಕ್ರಿಯಾಶೀಲರಾಗಿದ್ದರು.[10] ಸರ್ ಎಡ್ವರ್ಡ್ ಹೈಡ್ ಈಸ್ಟ್, ಡೇವಿಡ್ ಹೇರ್, ಸರ್ ಎಡ್ವರ್ಡ್ ರೈಯಾನ್ ಮತ್ತು ಜೇಮ್ಸ್ ಯಂಗ್ ಅಂತಹ ಐರೋಪ್ಯ ಅಧಿಕಾರಿಗಳು ಮತ್ತು ವ್ಯಾಪಾರಿಗಳು ಕಲ್ಕತ್ತದಲ್ಲಿ ಇಂಗ್ಲಿಷ್ ಶಿಕ್ಷಣವನ್ನು ಪ್ರಚಾರ ಮಾಡಲು ಬಹಳಷ್ಟು ಕೆಲಸ ಮಾಡಿದರು. ಒಂದು ದಶಕದ ಅನಂತರ 1817 ರಲ್ಲಿ ಈ ಎಲ್ಲ ಪ್ರಯತ್ನಗಳ ಪರಾಕಾಷ್ಠೆ ಎಂಬಂತೆ ಕಲ್ಕತ್ತಾದಲ್ಲಿ ಹಿಂದೂ ಕಾಲೇಜ್‌ನ ಮತ್ತು ಬಾಂಬೆಯಲ್ಲಿ ಎಲ್ಫಿನ್ ಸ್ಟೋನ್ ಸಂಸ್ಥೆಗಳ ಸ್ಥಾಪನೆಯಾಯಿತು.

1823 ರಲ್ಲಿ ಸರ್ಕಾರವು ಒಂದು ಸಾಮಾನ್ಯ ಸಾರ್ವಜನಿಕ ಶಿಕ್ಷಣ ಸಮಿತಿಯನ್ನು ನೇಮಿಸಿತು. ಕಂಪನಿಯು ಪಾಶ್ಚಾತ್ಯ ಅಥವಾ ಪೌರಸ್ತ್ಯ ಶಿಕ್ಷಣಕ್ಕೆ ಪ್ರೋತ್ಸಾಹ ನೀಡಬೇಕೇ. ಶಿಕ್ಷಣ ಮಾಧ್ಯಮವು ಇಂಗ್ಲಿಷ್ ಅಥವಾ ಒಂದು ಅಭಿಜಾತ (classical) ಭಾರತೀಯ ಭಾಷೆ ಅಥವಾ ದೇಶೀಯ ಭಾಷೆ ಆಗಿರಬೇಕೇ, ಮತ್ತು ಗುರಿಯು ಸಾಮೂಹಿಕ ಶಿಕ್ಷಣವೇ ಅಥವಾ ಗಣ್ಯರ ಶಾಲೆಗಳೇ ಎಂಬ ವಿಚಾರವಾಗಿ ಮುಂದಿನ ಒಂದು ದಶಕದ ಕಾಲ ಸಮಿತಿಯ ಒಳಗೆ ಮತ್ತು ಹೊರಗೆ ಚರ್ಚೆಗಳು ನಡೆಯುತ್ತಲೇ ಇದ್ದವು.

ಈ ಮಧ್ಯೆ ಕಲ್ಕತ್ತ, ಬಾಂಬೆ ಮತ್ತು ಮದ್ರಾಸ್‌ಗಳಲ್ಲಿ ಗಮನಾರ್ಹ ಸಾಮಾಜಿಕ-ಆರ್ಥಿಕ ಬದಲಾವಣೆಗಳು ಸಂಭವಿಸುತ್ತಿದ್ದವು. ಕಂಪನಿಯ ವ್ಯಾಪಾರ ಮತ್ತು ಬ್ರಿಟಿಷ್ ವ್ಯಾಪಾರಿಗಳ ಉಪಸ್ಥಿತಿಯ ಪರಿಣಾಮವಾಗಿ, ಭಾರತೀಯರು ಇಂಗ್ಲಿಷ್ ಜ್ಞಾನವು ಬಹಳ ಉಪಯುಕ್ತ ಎಂದು ಕಂಡುಕೊಂಡರು. ಇಂಗ್ಲಿಷ್ ಬಲ್ಲವರಿಗೆ ಕಂಪನಿಯ ಆಶ್ರಯದಲ್ಲಿ ಗುಮಾಸ್ತರ ಕೆಲಸಗಳು ಅಥವಾ ಖಾಸಗಿ ಏಜೆನ್ಸಿಗಳಲ್ಲಿ ಉದ್ಯೋಗ ಲಭ್ಯವಾಗಿದ್ದವು. ತತ್ಪರಿಣಾಮವಾಗಿ ಇಂಗ್ಲಿಷ್ ಶಿಕ್ಷಣವು ಅಪಾರ ಜನಪ್ರಿಯತೆಯನ್ನು ಗಳಿಸಲಾರಂಭಿಸಿತ್ತು. ಅರೇಬಿಕ್ ಮತ್ತು ಸಂಸ್ಕೃತ ವಿದ್ಯಾರ್ಥಿಗಳಿಗೆ ಸರ್ಕಾರವೇ ವಿದ್ಯಾರ್ಥಿವೇತನವನ್ನು ಕೊಡಬೇಕಾಗಿತ್ತು. ಆದರೆ ಇಂಗ್ಲಿಷ್ ಕಲಿಯುವವರು ತಾವೇ ಶುಲ್ಕವನ್ನು ಕೊಡಲು ಸಿದ್ಧವಾಗಿದ್ದರು. ಸಾಮಾನ್ಯ ಸಾರ್ವಜನಿಕ ಶಿಕ್ಷಣ ಸಮಿತಿಯು ಮುದ್ರಿಸಿದ ಸಾವಿರಾರು ಅರೇಬಿಕ್ ಮತ್ತು ಸಂಸ್ಕೃತ ಗ್ರಂಥಗಳು ಮಾರಾಟವಾಗದೆ ಉಗ್ರಾಣದಲ್ಲಿ ಉಳಿದು ಹೋದವು. ಆದರೆ ಕಲ್ಕತ್ತಾ ಸ್ಕೂಲ್ ಬುಕ್ ಸೊಸೈಟಿಯು ಪ್ರತಿವರ್ಷ ಏಳರಿಂದ ಎಂಟು ಸಾವಿರ ಇಂಗ್ಲಿಷ್ ಪುಸ್ತಕಗಳನ್ನು ಮಾರಾಟ ಮಾಡುತ್ತಿತ್ತು.[11] ಆದರೆ ಇಂಗ್ಲಿಷ್ ಕಲಿಕೆಯು ಲೌಕಿಕ ಯಶಸ್ಸಿಗೆ ಉಪಯುಕ್ತ ಎಂಬ ಏಕಮಾತ್ರ ಕಾರಣಕ್ಕಾಗಿಯೇ ಎಲ್ಲಾ ಭಾರತೀಯರು ಇಂಗ್ಲಿಷ್ ಕಲಿಯಲು ಬಯಸುತ್ತಿರಲಿಲ್ಲ. ಭಾರತವು ತನ್ನ ಪುನರುಜ್ಜೀವನಕ್ಕಾಗಿ ಪಾಶ್ಚಾತ್ಯ ಜ್ಞಾನವನ್ನು ಮೈಗೂಡಿಸಿಕೊಳ್ಳಬೇಕು ಎಂದು ನಂಬಿದವರು ಅಲ್ಲಿದ್ದರು. ಇಂಥವರಲ್ಲಿ ರಾಜಾರಾಮ್ ಮೋಹನ್ ರಾಯ್ ಮುಂಚೂಣಿಯಲ್ಲಿದ್ದರು. ಅವರು ಪ್ರಭಾರಿ ಗವರ್ನರ್ ಜನರಲ್ ಲಾರ್ಡ್ ಆ್ಯಮ್‌ಹರ್ಸ್ಟ್ ಅವರಿಗೆ ಬರೆದ ಒಂದು ಪತ್ರದಲ್ಲಿ ಕಲ್ಕತ್ತಾದಲ್ಲಿ ಸಂಸ್ಕೃತ ಕಾಲೇಜನ್ನು ಸ್ಥಾಪಿಸುವುದರ ವಿರುದ್ಧ ಬಲವಾಗಿ ಪ್ರತಿಭಟಿಸಿದ್ದರು. ಅದು ಕೇವಲ "ಕಲಿತವರಿಗಾಗಲಿ ಅಥವಾ ಸಮಾಜಕ್ಕಾಗಲಿ ಯಾವುದೇ ಪ್ರಾಯೋಗಿಕ ಪ್ರಯೋಜನಕ್ಕೂ ಬಾರದ ವ್ಯಾಕರಣದ ಸೂಕ್ಷ್ಮಾಂಶಗಳನ್ನು ಮತ್ತು ರೂಪಕಾಲಂಕಾರದ ವೈಶಿಷ್ಟ್ಯಗಳನ್ನು ಯುವಜನರ ಬುದ್ಧಿಯ ಮೇಲೆ ಹೇರುತ್ತದೆ."[12] ಸಂಸ್ಕೃತ ಕಾಲೇಜಿನ ವಿದ್ಯಾರ್ಥಿಗಳು ತಮ್ಮ ಶಿಕ್ಷಣದ ನಿರುಪಯುಕ್ತತೆಯನ್ನು ಕರುಣಾಜನಕವಾಗಿ ಪ್ರತಿಪಾದಿಸುವ ಒಂದು ಅಹವಾಲನ್ನು ಬರೆದರು.[13] ಪತ್ರಿಕಾ ಮಾಧ್ಯಮಗಳಲ್ಲಿ ಮತ್ತು ಬೇರೆಡೆ ಇಂಗ್ಲೀಷ್ ಶಿಕ್ಷಣಕ್ಕೆ ಹೆಚ್ಚಿನ

ಸೌಕರ್ಯಗಳನ್ನು ಒದಗಿಸಬೇಕೆಂದು ಸುಶಿಕ್ಷಿತ ಬಂಗಾಳಿಗಳು ಹಕ್ಕೊತ್ತಾಯವನ್ನು ಮಂಡಿಸುತ್ತಿದ್ದರು.[14]

ಸಾಮಾನ್ಯ ಸಾರ್ವಜನಿಕ ಶಿಕ್ಷಣ ಸಮಿತಿಯವರು ಇದನ್ನು ಸುಲಭವಾಗಿ ಒಪ್ಪಲಿಲ್ಲ.[15] ಎಚ್.ಎಚ್.ವಿಲ್ಸನ್ ಮತ್ತು ಎಚ್.ಟಿ. ಪ್ರಿನ್ಸೆಪ್ ಅಂತಹ ಪೌರಸ್ತ್ಯ ವಿದ್ವಾಂಸರು ಭಾರತೀಯ ಅಭಿಜಾತ ಭಾಷೆಗಳ (classical languages –e.g. Sanksrit) ಅಧ್ಯಯನದ ಬೆಂಬಲಿಗರಾಗಿದ್ದರು. ಸ್ವದೇಶಿಯ ಕಲಿಕೆಗೆ ಸಾರ್ವಜನಿಕರ ಹಕ್ಕೊತ್ತಾಯವಿದೆ ಮತ್ತು 1813ರ ಸನ್ನದು ಅಧಿನಿಯಮವು ಅದನ್ನು ಪ್ರೋತ್ಸಾಹಿಸುವುದಕ್ಕೆ ಕಂಪನಿಯನ್ನು ಬದ್ಧವಾಗಿಸಿದೆ ಎನ್ನುವುದು ಅವರ ನಿಲುವಾಗಿತ್ತು. 1830ರ ದಶಕದಲ್ಲಿ ಸಮಿತಿಯೊಳಗೆ ಕಾಣಿಸಿಕೊಂಡ ಯುವ ಘಟಕವು ಸಂಸ್ಕೃತ ಮತ್ತು ಅರೇಬಿಕ್ ಭಾಷೆಯ ಅಧ್ಯಯನವು ಸಮಯ ಮತ್ತು ಹಣದ ವ್ಯರ್ಥ ಬಳಕೆ ಎಂದು ಭಾವಿಸಿತು. ಸಮಿತಿಯಲ್ಲಿ ಇಂಗ್ಲಿಷ್ ಪಂಡಿತರು ಮತ್ತು ಪೌರಸ್ತ್ಯ ಪಂಡಿತರು ಸಮ ಸಮವಾಗಿದ್ದರು. ಆದ್ದರಿಂದ ಈ ಸಮಸ್ಯೆಯನ್ನು ಮಧ್ಯಸ್ಥಿಕೆಗಾಗಿ ಸರ್ಕಾರಕ್ಕೆ ವಹಿಸಲಾಯಿತು. ಮೆಕಾಲೆಯು ಸಾಮಾನ್ಯ ಸಾರ್ವಜನಿಕ ಶಿಕ್ಷಣ ಸಮಿತಿಯ ಅಧ್ಯಕ್ಷನಷ್ಟೇ ಅಲ್ಲದೆ ಕಾನೂನು ಸದಸ್ಯನೂ ಆಗಿದ್ದನು. ಆದ್ದರಿಂದ ಈ ವಿಷಯವಾಗಿ ತೀರ್ಪನ್ನು ಕೊಡಲು ಬೆಂಟಿAಕನು ಸಮಸ್ಯೆಯನ್ನು ಅವನಿಗೆ ರವಾನಿಸಿದನು. ಇದರ ಫಲಿತಾಂಶವೇ ಪ್ರಖ್ಯಾತವಾದ 2ನೇ ಫೆಬ್ರುವರಿ 1835ರ ನಡಾವಳಿ. ಸರ್ಕಾರದಿಂದ ಆರ್ಥಿಕ ನೆರವನ್ನು ಪಡೆಯುವ ಉನ್ನತ ಶಿಕ್ಷಣದಲ್ಲಿ ಅಳವಡಿಸಬೇಕಾದ ಶಿಕ್ಷಣ ಮಾಧ್ಯಮವನ್ನು ಕುರಿತ ತೀರ್ಮಾನವಾಗಿ ಮೆಕಾಲೆ ಈ ಸಮಸ್ಯೆಯನ್ನು ಸಂಕುಚಿತಗೊಳಿಸಿದನು. ಅವನು "ನಿಕೃಷ್ಟ ಮತ್ತು ಅನಾಗರಿಕ" ಎಂದು ತಿರಸ್ಕರಿಸಿದ ದೇಶೀಯ ಭಾಷೆಗಳ ಅಸಮರ್ಪಕತೆಯ ದೃಷ್ಟಿಯಿಂದಾಗಿ ಅವನ ಪ್ರಕಾರ ಆಯ್ಕೆ ಉಳಿದದ್ದು ಇಂಗ್ಲಿಷ್ ಮತ್ತು ಪೌರಸ್ತ್ಯ ಅಭಿಜಾತ ಭಾಷೆಗಳ ನಡುವೆ. ಉಪಯುಕ್ತತೆ ಮತ್ತು ಜ್ಞಾನವನ್ನು ಹೊಂದಲು ಅವಕಾಶ ಕೊಡುವ ಅದರ ಅಂತರ್ನಿಹಿತ ಗುಣದ ಆಧಾರದ ಮೇಲೆ ಅವನು ಸ್ವಲ್ಪವೂ ಹಿಂದೆಗೆಯದೆ ಇಂಗ್ಲಿಷ್ ಪರವಾಗಿ ತೀರ್ಮಾನವನ್ನು ತೆಗೆದುಕೊಂಡನು.[16]

ಬೆಂಟಿಂಕ್ ಒಬ್ಬ ಉದಾರವಾದಿಯಾಗಿದ್ದ. ಅವನು ಬೆಂತಮೈಟ್ ಮತ್ತು ಪ್ರಯೋಜನವಾದಿ ವಿಚಾರಗಳಿಂದ ಪ್ರಭಾವಿತನಾಗಿದ್ದ.[17] ಶೈಕ್ಷಣಿಕ ವಿವಾದಕ್ಕೆ ಮುಖಾಮುಖಿಯಾದಾಗ ಅವನು ಮೆಕಾಲೆಯನ್ನು ಬೆಂಬಲಿಸಿದ. ಮೆಕಾಲೆಯ ಮನಮೋಹಕ ವಾಗ್ವಿಲಾಸವು ಅವನ ಮನ ಮುಟ್ಟಿತು ಎನ್ನುವುದರಲ್ಲಿ ಅನುಮಾನವಿಲ್ಲ. ಆದರೆ ಗವರ್ನರ್ ಜನರಲ್ ಪ್ರಾಯಃ ಟ್ರೆವೇಲಿಯನ್, ಮತ್ತು ಮೆಟ್‌ಕಾಫ್ ಅಂತಹ ತನ್ನ ಅಧಿಕಾರಿಗಳು ಹಾಗೂ ಸ್ಕಾಟ್ಲೆಂಡಿನ ಧರ್ಮಪ್ರಚಾರಕ ಅಲೆಕ್ಸಾಂಡರ್ ಡಫ್ ಅವರ ಅಭಿಪ್ರಾಯಗಳಿಂದ ಪ್ರಭಾವಿತನಾಗಿದ್ದ. ಅವರೆಲ್ಲ ಭಾರತೀಯ ಅಭಿಜಾತ ಗ್ರಂಥಗಳ ಕಲಿಕೆಗೆ ಸಂಬಂಧಿಸಿದಂತೆ ಮೆಕಾಲೆಯ ತೀವ್ರ ತಿರಸ್ಕಾರದಲ್ಲಿ ತಾವೂ ಪಾಲ್ಗೊಂಡಿದ್ದರು. ಮೆಕಾಲೆ ತನ್ನ ವರದಿಯನ್ನು ಕಳುಹಿಸಿದ ಮೇಲೆ ಒಂದು ತಿಂಗಳು ಕಳೆಯುತ್ತಿದ್ದಂತೆಯೇ ಬೆಂಟಿಂಕ್ ವಿಳಂಬಿತ ವಿವಾದಕ್ಕೆ ಮುಕ್ತಾಯ ಹಾಡಿದ. ಅವನು ಕೊಟ್ಟ ತೀರ್ಮಾನ ಹೀಗಿತ್ತು: "ಇನ್ನು ಮುಂದೆ ಭಾರತದಲ್ಲಿರುವ ಬ್ರಿಟಿಷ್ ಸರ್ಕಾರದ ಮಹಾನ್ ಉದ್ದೇಶವು ಭಾರತದ ನಿವಾಸಿಗಳಲ್ಲಿ ಐರೋಪ್ಯ ಸಾಹಿತ್ಯ ಮತ್ತು ವಿಜ್ಞಾನವನ್ನು ಪ್ರಸಾರ ಮಾಡುವುದು; ಶಿಕ್ಷಣದ ಉದ್ದೇಶಕ್ಕಾಗಿ ಮೀಸಲಾಗಿಟ್ಟಿರುವ ಎಲ್ಲ ನಿಧಿಯನ್ನೂ ಇಂಗ್ಲಿಷ್ ಶಿಕ್ಷಣಕ್ಕಷ್ಟೇ ಉಪಯೋಗಿಸುವುದು ಉತ್ತಮ."[18]

ಐರೋಪ್ಯ ವಿಚಾರಗಳು ಮತ್ತು ಜ್ಞಾನವನ್ನು ಮೈಗೂಡಿಸಿಕೊಳ್ಳುವ ಮೂಲಕ ಭಾರತವನ್ನು ನೈತಿಕವಾಗಿ ಮತ್ತು ಸಾಮಾಜಿಕವಾಗಿ ಪುನರುಜ್ಜೀವನಗೊಳಿಸಬೇಕು ಎಂದು ಇಂಗ್ಲೀಷ್ ಪಂಡಿತರು (Anglicists) ಬಯಸಿದ್ದರು. ಈಸ್ಟ್ ಇಂಡಿಯಾ ಕಂಪನಿಯ ಅನೇಕ ಯುವ ಸಿವಿಲ್ ಸೇವಕರು ಪ್ರಯೋಜನವಾದಿ ಮತ್ತು ಈವ್ಯಾಂಜೆಲಿಕಲ್ ವಿಚಾರಗಳಿಂದ ಪ್ರಭಾವಿತರಾಗಿದ್ದರು. ಇಂಗ್ಲೆಂಡ್ ಒಂದು ಉನ್ನತ ನಾಗರಿಕತೆಯನ್ನು

ಪ್ರತಿನಿಧಿಸುತ್ತದೆಯೆಂದೂ ಮತ್ತು ಅನುಸರಿಸಬೇಕಾದ ಒಂದು ನೈತಿಕ ಅಭಿಯಾನವನ್ನು ಹೊಂದಿದೆಯೆಂದೂ ಅವರು ನಂಬಿದ್ದರು. 1830ರಲ್ಲಿ ಪ್ರಧಾನಮಂತ್ರಿ ಲಾರ್ಡ್ ಗ್ರೇ ವಸಾಹತು ಪ್ರದೇಶಗಳಲ್ಲಿ ಪ್ರಗತಿಯ ಅಸ್ತಿವಾರವಾಗಿ ಶಿಕ್ಷಣಕ್ಕೆ ಮಹತ್ವದ ಸ್ಥಾನವನ್ನು ನೀಡಿದನು.[19]

ಇಂಗ್ಲಿಷ್ ಶಿಕ್ಷಣದ ಪ್ರಸಾರವು ಅನಾಸಕ್ತ ಔದಾರ್ಯದ ಒಂದು ಕ್ರಿಯೆಯಾಗಿರಲಿಲ್ಲ. ಅದು ಆಳುವವರು ಮತ್ತು ಆಳಿಸಿ ಕೊಳ್ಳುವವರ ನಡುವೆ ಒಂದು ಇತ್ಯಾತ್ಮಕ ಬಂಧವನ್ನು ಒದಗಿಸಬೇಕಾಗಿತ್ತು. ಟ್ರೆವೇಲಿಯನ್, "ಇಂಗ್ಲಿಷ್ ಸಾಹಿತ್ಯದ ಚೇತನವು ಇಂಗ್ಲಿಷ್ ಸಂಪರ್ಕವಿರುವ ಕಡೆ ಅನುಕೂಲಕರವಾಗಿರುವುದಲ್ಲದೆ ಬೇರೆ ಇರಲಾರದು" ಎಂದು ಬರೆದಿದ್ದಾನೆ. ಇಂಗ್ಲಿಷ್ ಶಿಕ್ಷಣವು ಭಾರತೀಯರು ನಮ್ಮನ್ನಾಳುತ್ತಿರುವವರು ವಿದೇಶಿಯರು ಎಂದು ಪರಿಗಣಿಸುವುದನ್ನು ತಡೆಯುತ್ತದೆ. ವಾಸ್ತವದಲ್ಲಿ ಅದು ಅವರನ್ನು "ಬುದ್ಧಿವಂತ ಮತ್ತು ಉತ್ಸಾಹಶೀಲ ಸಹಕಾರಿಗಳನ್ನಾಗಿ" ಮಾಡುತ್ತದೆ.[20] ಅದು ಬ್ರಿಟಿಷ್‌ರಾಜ್‌ನ ಶಾಶ್ವತತೆ ಮತ್ತು ಸ್ಥಿರತೆಗೆ ಮಾರ್ಗವಾಗುತ್ತದೆ. ಹೀಗೆ ಪಾಶ್ಚಾತ್ಯ ಜ್ಞಾನದ ಪ್ರಸರಣದ ರಾಜಕೀಯ ಲಾಭಗಳನ್ನು ಸ್ಪಷ್ಟವಾಗಿ ಗ್ರಹಿಸಲಾಗಿತ್ತು.

ತನ್ನ ಶಿಕ್ಷಣ ನೀತಿಯನ್ನು ರಚಿಸುವಾಗ ಬೆಂಟಿಂಕನು ಪ್ರಾಯೋಗಿಕ ಆಡಳಿತಾತ್ಮಕ ಪರಿಗಣನೆಗಳಿಂದಲೂ ನಿರ್ದೇಶಿತನಾಗಿದ್ದನು. 1833ರಲ್ಲಿ ಸನ್ನದ್ದು ಅಧಿನಿಯಮವು (Charter Act) ಅಂಗೀಕೃತವಾದಾಗ ಕಂಪನಿಯು ತೀವ್ರವಾದ ಆರ್ಥಿಕ ಸಂಕಷ್ಟದಲ್ಲಿ ಸಿಲುಕಿಕೊಂಡಿತ್ತು. ಬೆಂಟಿಂಕನ ಪ್ರಮುಖ ಕಾರ್ಯಗಳಲ್ಲಿ ಒಂದೆಂದರೆ ಮಿತವ್ಯಯವನ್ನು ಸಾಧಿಸುವುದಾಗಿತ್ತು. ಖರ್ಚಿನ ಪ್ರಮುಖ ಬಾಬುಗಳಲ್ಲಿ ಒಂದೆಂದರೆ ಇಂಗ್ಲೀಷ್ ಅಧಿಕಾರಿಗಳ ಅಧಿಕ ವೇತನ. ಆದ್ದರಿಂದ ಅವನು ನ್ಯಾಯಸ್ಥಾನ ಮತ್ತು ಕಂದಾಯ ಇಲಾಖೆಗಳಲ್ಲಿ ಭಾರತೀಯ ಅಧೀನ ಅಧಿಕಾರಿಗಳನ್ನು ನೇಮಿಸಿಕೊಳ್ಳುವುದನ್ನು ಪರಿಗಣಿಸಿದನು.[21] 1822ರ ರೆಗ್ಯುಲೇಷನ್ VII ಮತ್ತು 1833 ರ IX ಪ್ರಕಾರ ವಾಯುವ್ಯ ಪ್ರಾಂತ್ಯಗಳಲ್ಲಿ ಕಂದಾಯ ಮೌಲ್ಯಮಾಪನದ ಹೊಸ ವಿಧಾನಗಳನ್ನು ಅಳವಡಿಸಿಕೊಳ್ಳುವುದು ವಿವರವಾದ ತನಿಖೆ ಮತ್ತು ಸರ್ವೇಕ್ಷಣೆಯನ್ನು ಅವಲಂಬಿಸಿತ್ತು. ಇದಕ್ಕೆ ಅಪಾರ ಸಂಖ್ಯೆಯಲ್ಲಿ ಭಾರತೀಯರನ್ನು ನೇಮಿಸಿಕೊಳ್ಳಬೇಕಾಗಿತ್ತು. 1831-32 ರಲ್ಲಿ ಸಂಸದ್ ಸಮಿತಿಯ ಮುಂದೆ ಹೋಲ್ಟ್ ಮೆಕೆಂಜಿಯು ಸಾಕ್ಷ್ಯವನ್ನು ನೀಡುತ್ತಾ ದೇಶೀಯರನ್ನು ನೇಮಿಸಿಕೊಳ್ಳುವುದರಿಂದ ಭಾರತದ ಅರ್ಥವ್ಯವಸ್ಥೆಯು ಸುಧಾರಿಸುತ್ತದೆಂದು ಸಾಧಿಸಲು ಅಂಕಿಅಂಶಗಳನ್ನು ಮಂಡಿಸಿದನು. ಭಾರತೀಯರನ್ನು ನೇಮಿಸಿಕೊಳ್ಳುವುದರಿಂದ ಬ್ರಿಟಿಷ್ ಆಡಳಿತದೊಂದಿಗೆ ಅವರ ಸಂಬಂಧವು ಗಟ್ಟಿಗೊಳ್ಳುತ್ತದೆಂದೂ ಮತ್ತು ಅವರ ಪರಿಸ್ಥಿತಿ ಹಾಗೂ ಚಾರಿತ್ರ್ಯವನ್ನು ಸುಧಾರಿಸುತ್ತದೆಂದೂ ಅವನು ವಾದಿಸಿದನು.[22]

ಈಸ್ಟ್ ಇಂಡಿಯಾ ಕಂಪನಿಯ ಪ್ರಥಮ ಶೈಕ್ಷಣಿಕ ಗುರಿಯು ಅಗ್ಗದ ಸಂಬಳ ನೀಡಿ ನೇಮಿಸಿಕೊಳ್ಳಬಹುದಾದ ಗುಮಾಸ್ತರನ್ನು ಸೃಷ್ಟಿಸುವುದಾಗಿತ್ತು. ಇಂಗ್ಲಿಷ್ ಶಿಕ್ಷಣ ಪಡೆದ ಭಾರತೀಯರು ಲಂಕಾಷೈರ್ ಉತ್ಪನ್ನಗಳ ಬಗೆಗೆ ಅಭಿರುಚಿಯನ್ನು ಬೆಳೆಸಿಕೊಳ್ಳಬಹುದೆನ್ನುವುದು ಮುಕ್ತ ವ್ಯಾಪಾರಿಗಳ ಆಶಯವಾಗಿತ್ತು. ಧರ್ಮಪ್ರಚಾರಕರಿಗಾದರೋ ಹೊಸ ಶಿಕ್ಷಣವು ಭಾರತೀಯರನ್ನು ಕ್ರೈಸ್ತ ಧರ್ಮಕ್ಕೆ ಮತಾಂತರಿಸಲು ಮೊದಲ ಹೆಜ್ಜೆಯಾಗಿತ್ತು. ಉದಾರವಾದಿಗಳಿಗೆ ನಾಗರಿಕಗೊಳಿಸುವುದು ಮತ್ತು ಪಾಶ್ಚಾತ್ಯ ಶಿಕ್ಷಣದ ಮಾನವೀಯ ಪ್ರಭಾವ ಬೀರುವುದು ಮುಖ್ಯವಾಗಿತ್ತು. ಮೆಕಾಲೆಯ ಪ್ರಕಾರ ಇಂಗ್ಲಿಷ್ ಶಿಕ್ಷಣದ ಗುರಿಯು ಹೀಗಿತ್ತು: "ರಕ್ತ ಮತ್ತು ಮೈಬಣ್ಣದಲ್ಲಿ ಭಾರತೀಯವಾಗಿದ್ದು ಅಭಿರುಚಿ, ಅಭಿಪ್ರಾಯ ಮತ್ತು ಬುದ್ಧಿಶಕ್ತಿಯಲ್ಲಿ ಇಂಗ್ಲಿಷರಾಗಿರುವಂತಹ ಜನವರ್ಗವನ್ನು ರೂಪಿಸುವುದು." ಅದು "ಸರ್ಕಾರ ಮತ್ತು ಅದು ಆಳುವ ಕೋಟ್ಯಂತರ ಜನರ ನಡುವೆ ದುಭಾಷಿಗಳಾಗಿ ಸೇವೆ ಸಲ್ಲಿಸುವ ಒಂದು ವರ್ಗ." ಇದು ಮೊದಲು ಚಾರ್ಲ್ಸ್ ಗ್ರ್ಯಾಂಟ್ ರೂಪಿಸಿದ ಸಾಂಸ್ಕೃತಿಕ ವಿಜಯದ ಕಲ್ಪನೆಯ ಸುಧಾರಿತ

ರೂಪವಾಗಿತ್ತು. ಹೀಗೆ ಇಂಗ್ಲಿಷ್ ಶಿಕ್ಷಣವನ್ನು ರೂಢಿಗೆ ತರುವ ನಿರ್ಣಯವು ಸಂಕೀರ್ಣವಾದ ಆರ್ಥಿಕ, ಆಡಳಿತಾತ್ಮಕ, ರಾಜಕೀಯ, ಧಾರ್ಮಿಕ ಮತ್ತು ನೈತಿಕ ಉದ್ದೇಶಗಳ ಸಂಯೋಜನೆಯ ಫಲಿತಾಂಶವಾಗಿತ್ತು. ಪಾಶ್ಚಾತ್ಯ ಶಿಕ್ಷಣವನ್ನು ರೂಢಿಗೆ ತರುವ ಒತ್ತಡವು ಇಂಗ್ಲೆAಡಿನಲ್ಲಿರುವ ಗುಂಪುಗಳಿಗಷ್ಟೇ ಸೀಮಿತವಾಗಿರಲಿಲ್ಲ. ಭಾರತದಲ್ಲಿ ಧರ್ಮಪ್ರಚಾರಕರು ಮತ್ತು ಕಂಪನಿಯ ಬಿಡಿ ಅಧಿಕಾರಿಗಳು (individual officials) ಅದಕ್ಕಾಗಿ ಕಾರ್ಯಪ್ರವೃತ್ತರಾಗಿದ್ದರು. 1820 ರ ದಶಕದಲ್ಲಿ ಅದಕ್ಕಾಗಿ ಭಾರತೀಯ ಬೇಡಿಕೆಯೂ ಹೊರಹೊಮ್ಮಿತು. ಆದ್ದರಿಂದ ಶೈಕ್ಷಣಿಕ ಬದಲಾವಣೆಗಳ ಹಿಂದಿನ ಪ್ರಚೋದನೆಯು ಬ್ರಿಟಿಷ್ ನೀತಿ ನಿರೂಪಕರಿಂದಷ್ಟೇ ಹರಿದು ಬರಲಿಲ್ಲ.

1837ರಲ್ಲಿ ಅಧಿಕೃತ ಹಾಗೂ ಆಸ್ಥಾನದ ಭಾಷೆಯಾಗಿ (Court language) ಇಂಗ್ಲಿಷ್ ಭಾಷೆಯು ಪರ್ಷಿಯನ್ ಭಾಷೆಯ ಸ್ಥಾನವನ್ನು ಆಕ್ರಮಿಸಿಕೊಂಡಾಗ ಅದರ ಜನಪ್ರಿಯತೆಯು ಹೆಚ್ಚಾಯಿತು. ಅದಕ್ಕೂ ಮಿಗಿಲಾಗಿ 1844 ರಲ್ಲಿ ಲಾರ್ಡ್ ಹಾರ್ಡಿಂಜ್ ಇಂಗ್ಲಿಷ್ ಶಿಕ್ಷಣ ಪಡೆದ ಭಾರತೀಯರಿಗೆ ಎಲ್ಲ ಸರ್ಕಾರಿ ನೇಮಕಾತಿಗಳಲ್ಲಿ ಆದ್ಯತೆಯನ್ನು ನೀಡಲಾಗುವುದು ಎಂದು ಘೋಷಿಸಿದಾಗ ಇಂಗ್ಲೀಷ್‌ನ ಜನಪ್ರಿಯತೆಯು ಇನ್ನೂ ಹೆಚ್ಚಾಯಿತು. ಹೊಸ ಶಾಲೆಯಲ್ಲಿ ಪಡೆದ ಶಿಕ್ಷಣವು ವೃತ್ತಿಗಳು ಹಾಗೂ ಸರ್ಕಾರಿ ಸೇವೆಗೆ ಪ್ರವೇಶಿಸಲು ಒಂದು ರಹದಾರಿಯಾಯಿತು.

ಈಸ್ಟ್ ಇಂಡಿಯಾ ಕಂಪನಿಯ ಶಿಕ್ಷಣ ನೀತಿಯಲ್ಲಿ 1813 ನೇ ಇಸವಿಯು ಮೊದಲ ಪ್ರಮುಖ ಹೆಗ್ಗುರುತಾಯಿತು; 1835 ಎರಡನೆಯದು. ಮುಂದಿನ ಪ್ರಮುಖ ಕ್ರಮವು 1854 ರಲ್ಲಿ ಬಂದಿತು. 1853 ರಲ್ಲಿ ಈಸ್ಟ್ ಇಂಡಿಯಾ ಕಂಪನಿಯ ಸನ್ನದನ್ನು ನವೀಕರಣ ಮಾಡುವುದಕ್ಕೆ ಸಂಬಂಧಿಸಿದಂತೆ ಭಾರತದಲ್ಲಿನ ಶೈಕ್ಷಣಿಕ ಸನ್ನಿವೇಶವನ್ನು ಸಮೀಕ್ಷಿಸಲು ಒಂದು ಸಮಿತಿಯನ್ನು ನೇಮಿಸಲಾಯಿತು. ಅದರ ನಿರ್ಣಯಗಳು ಮತ್ತು ಶಿಫಾರಸುಗಳನ್ನು ಸರ್ ಚಾರ್ಲ್ಸ್‌ವುಡ್ ಕಳುಹಿಸಿದ ಒಂದು ಲಿಖಿತ ಓಲೆಯಲ್ಲಿ ಅಳವಡಿಸಲಾಗಿತ್ತು. ಆಗ ಅವನು ನಿಯಂತ್ರಣ ಮಂಡಲಿಯ ಅಧ್ಯಕ್ಷನಾಗಿದ್ದ.[23]

ಹೆಚ್ಚು ಕ್ರಿಯಾಶಾಲಿಯಾದ ಶೈಕ್ಷಣಿಕ ನೀತಿಯನ್ನು ಅನುಸರಿಸುವ ಒತ್ತಡದಲ್ಲಿ ಸರ್ಕಾರವಿತ್ತು. ರವಾನಿಸಲಾಗಿದ್ದ ಸಲಹೆಗಳಲ್ಲಿ ವಿಶ್ವವಿದ್ಯಾಲಯಗಳನ್ನು ಪ್ರಾರಂಭಿಸುವುದೂ ಒಂದಾಗಿತ್ತು. ಮೂರನೆಯ ದಶಕದಲ್ಲಿ ಶೈಕ್ಷಣಿಕ ವಿವಾದಗಳಲ್ಲಿ ಪ್ರಮುಖನಾಗಿದ್ದ ಟ್ರೆವೇಲಿಯನ್, ನಾಲ್ಕನೆಯ ದಶಕದಲ್ಲಿ ಗವರ್ನರ್ ಜನರಲ್ ಅವರ ಕೌನ್ಸಿಲ್‌ನಲ್ಲಿ ಕಾನೂನು ಸದಸ್ಯನಾಗಿದ್ದ ಸಿ.ಎಚ್. ಕ್ಯಾಮೆರಾನ್, ಧರ್ಮ ಪ್ರಚಾರಕರಾಗಿದ್ದ ಅಲೆಗ್ಸಾಂಡರ್ ಡಫ್ ಮತ್ತು ಜಾನ್ ಮಾರ್ಷ್ಮನ್ 1853 ರಲ್ಲಿ ಭಾರತವನ್ನು ಕುರಿತ ಹೌಸ್ ಆಫ್ ಲಾರ್ಡ್ಸ್ನ ಆಯ್ಕೆ ಸಮಿತಿಯ ಮುಂದೆ ವಿಶ್ವವಿದ್ಯಾಲಯಗಳ ಅಗತ್ಯವನ್ನು ಒತ್ತಿ ಹೇಳುವವರಲ್ಲಿ ಕೆಲವರಾಗಿದ್ದರು.[24] ಪ್ರಾರಂಭದಲ್ಲಿ ವುಡ್ ವಿಶ್ವವಿದ್ಯಾಲಯಗಳನ್ನು ಕುರಿತು ಅಷ್ಟೇನೂ ಉತ್ಸಾಹಪೂರ್ಣನಾಗಿರಲಿಲ್ಲ. ಭಾರತೀಯರನ್ನು ವರಿಷ್ಠ ಹುದ್ದೆಗಳಿಗೆ ಅಧಿಕ ಸಂಖ್ಯೆಯಲ್ಲಿ ನೇಮಿಸಿಕೊಳ್ಳುವುದನ್ನು ಅವನು ಕಲ್ಪಿಸಿಕೊಂಡಿರಲಿಲ್ಲ.[25] ಅಂತಹ ಸನ್ನಿವೇಶಗಳಲ್ಲಿ ಒಂದು ವಿಶ್ವವಿದ್ಯಾಲಯಕ್ಕೆ ಪ್ರೋತ್ಸಾಹ ನೀಡುವುದು ಅವನಿಗೆ ಅನಗತ್ಯ ಅಪಾಯಕಾರಿ ಎಂದು ತೋರಿತು.

> ಹಿಂದೂಗಳಿಗೆ ಬೇಕನ್ ಅನ್ನು ಓದಲು ಹೇಳುವುದರ ಬಗೆಗೆ ಮತ್ತು ಆಕ್ಸ್ ಫರ್ಡ್ ನಲ್ಲಿ ಆನರ್ಸ್ ಗೆ ನಾವು ಮಾಡುತ್ತಿರುವಂತೆ ಪರೀಕ್ಷೆಯನ್ನು ನಡೆಸುವುದರ ಬಗೆಗೆ ನನಗೆ ಅಷ್ಟೇನೂ ಆಸಕ್ತಿಯಿಲ್ಲ… ಉನ್ನತ ಶಿಕ್ಷಣ ಪಡೆದ ಈ ದೇಶಿಯರು ಉದ್ಯೋಗ ಸಿಗದಿದ್ದರೆ ಅತ್ಯಂತ ಅತೃಪ್ತರಾಗುತ್ತಾರೆ ಎಂದು ನಾನು ಭಾವಿಸುತ್ತೇನೆ. ನಾವು ಅವರೆಲ್ಲರಿಗೂ ಉದ್ಯೋಗವನ್ನು ಹೊಂಚುವುದೂ ಸಾಧ್ಯವಾಗಲಾರದು.[26]

"ಕೆಳಹಂತದಲ್ಲಿರುವವರಿಗೆ ಉಪಯುಕ್ತವಾದ ಉಪಕಸುಬುಗಳನ್ನು ಹೊಂದಿಸುವುದರಲ್ಲಿ." ವುಡ್‌ಗೆ ಇನ್ನೂ ಹೆಚ್ಚಿನ ಆಸಕ್ತಿ ಇತ್ತು.[27] ಆದರೆ ಮಾರ್ಷಮನ್ ಮತ್ತು ಧರ್ಮಪ್ರಚಾರಕರ ಒತ್ತಡದಿಂದಾಗಿ ಅವನು ವಿಶ್ವವಿದ್ಯಾಲಯಗಳ ಕಲ್ಪನೆಗೆ ಸಮ್ಮತಿಸಿದನು. ಮುಖ್ಯವಾಗಿ ಎಲ್ಲ ಬಗೆಯ ಕಾಲೇಜುಗಳಿಂದ ಬಂದ ವಿದ್ಯಾರ್ಥಿಗಳಿಗೆ ಪರೀಕ್ಷೆಯನ್ನು ನಡೆಸುವುದು ಮತ್ತು ಪದವಿ ಪ್ರದಾನ ಮಾಡುವುದು ಇದರ ಉದ್ದೇಶವಾಗಿತ್ತು. ಉನ್ನತ ಶಿಕ್ಷಣಕ್ಕೆ ಸರ್ಕಾರವು ಸಹಾಯಧನ ನೀಡುವುದಕ್ಕೆ ಅವನ ವಿರೋಧವಿತ್ತು. "ಉನ್ನತ ಶಿಕ್ಷಣದ ಬಗೆಗೆ ಯಾರಿಗೆ ತೀವ್ರವಾದ ಕಾತರವಿದೆಯೋ ಅವರಿಗೇ ಪ್ರಧಾನವಾಗಿ ಅದಕ್ಕೆ ನೆರವು ನೀಡಲು ಬಿಡಬೇಕು ಎನ್ನುವುದು ನನ್ನ ಅಭಿಪ್ರಾಯ."[28] ಲಂಡನ್ ವಿಶ್ವವಿದ್ಯಾಲಯದ ಮಾದರಿಯಿಂದ ವುಡ್ ಆಕರ್ಷಿತನಾಗಿದ್ದ. ಆಗ ಅದರ ಮುಖ್ಯ ಉದ್ದೇಶವು ಪರೀಕ್ಷೆಗಳನ್ನು ನಡೆಸುವುದು, ಕಾಲೇಜುಗಳನ್ನು ಅಂಗ ಸಂಸ್ಥೆಗಳಾಗಿ ಸಂಯೋಜಿಸಿಕೊಳ್ಳುವುದು ಮತ್ತು ಪದವಿಗಳನ್ನು ಪ್ರದಾನ ಮಾಡುವುದು ಆಗಿತ್ತು. ಹೀಗೆ ಲಂಡನ್ ವಿಶ್ವವಿದ್ಯಾಲಯದ ಮಾದರಿಯಲ್ಲಿ 1857ರಲ್ಲಿ ಕಲ್ಕತ್ತ, ಮದ್ರಾಸ್ ಮತ್ತು ಬಾಂಬೆ ವಿಶ್ವವಿದ್ಯಾಲಯಗಳನ್ನು ಸ್ಥಾಪಿಸಲಾಯಿತು.

ವುಡ್‌ನ ಲಿಖಿತ ಒಲೆ ಮತ್ತೂ ಶಿಫಾರಸುಗಳ ಪರಿಣಾಮವಾಗಿ ಸಾರ್ವಜನಿಕ ಶಿಕ್ಷಣ ಇಲಾಖೆಯೊಂದಗಳ ಪರಿಣಾಮವಾಗಿ ಮತ್ತು ಅಪೇಕ್ಷಿತರಿಗೆ ಹಾಗೂ ಅರ್ಹರಾದವರಿಗೆ ಅನುದಾನವನ್ನು ನೀಡುವುದು ಸಾಧ್ಯವಾಯಿತು. ಶಿಕ್ಷಣ ಇಲಾಖೆಗಳು ಮತ್ತು ವಿಶ್ವವಿದ್ಯಾಲಯಗಳನ್ನು ಸ್ಥಾಪಿಸುವ ಮೂಲಕ ಹೊಸ ಶಿಕ್ಷಣ ಪದ್ಧತಿಯು ಭದ್ರವಾಗಿ ಬೇರೂರಿತು.

1835 ರಲ್ಲಿ ರಚಿಸಲಾದ ಮತ್ತು 1854 ರಲ್ಲಿ ಪುನರ್ ದೃಢೀಕರಿಸಲಾದ ನೀತಿಯನ್ನು ಒಟ್ಟಿನಲ್ಲಿ 1947 ರವರೆಗೂ ದೃಢವಾಗಿ ಪಾಲಿಸಿಕೊಂಡು ಬರಲಾಯಿತು. ಪರಿಮಿತ ನಿಧಿಗಳು, ಆಡಳಿತಾತ್ಮಕ ಕೊರತೆಗಳು, ಅಲ್ಪಸಂಖ್ಯೆಯ ಸಿಬ್ಬಂದಿ ಮತ್ತು ಜನರೊಡನೆ ತನ್ನನ್ನು ಗುರುತಿಸಿಕೊಳ್ಳುವುದರಲ್ಲಿ ಅಸಮರ್ಥತೆ ಇವುಗಳು, ತನಗೆ ಪರಿಚಯವಿಲ್ಲದ ಹಲವಾರು ಭಾಷೆಗಳಲ್ಲಿ ಮಿಲಿಯಾಂತರ ಜನರಿಗೆ ಶಿಕ್ಷಣ ಕೊಡುವ ಬೃಹತ್ ಕಾರ್ಯದಿಂದ ಕಂಪನಿಯು ಹಿಮ್ಮೆಟ್ಟುವಂತೆ ಮಾಡಿದವು. 1835ಕ್ಕೆ ಮೊದಲು ಕೆಲವು ಅಧಿಕಾರಿಗಳು ಸಮೂಹ ಶಿಕ್ಷಣವನ್ನು ಪ್ರಚಾರಮಾಡುವ ಪ್ರಯತ್ನವನ್ನು ಮಾಡಿದ್ದರು.[29] ಆದರೆ ಆ ಪ್ರಯತ್ನಗಳಿಗೆ ಉತ್ತೇಜನ ಸಿಗಲಿಲ್ಲ.[30] 1839 ರಲ್ಲಿ ಲಾರ್ಡ್ ಓಕ್‌ಲ್ಯಾಂಡ್ ಪ್ರತಿಪಾದಿಸಿದ ನೀತಿಯ ಪ್ರಕಾರ ಮೇಲ್ವರ್ಗದವರಿಗೆ ಶಿಕ್ಷಣ ನೀಡಲು ಗಮನವನ್ನು ಕೇಂದ್ರೀಕರಿಸಬೇಕು ಎಂದಾಯಿತು. "ಅವರಿಗೆ ಅಧ್ಯಯನ ಮಾಡುವಷ್ಟು ಬಿಡುವಿರುತ್ತದೆ. ಅನಂತರ ಅವರ ಸಂಸ್ಕೃತಿಯು ಜನಸಾಮಾನ್ಯರಿಗೆ ಇಳಿದುಬರುತ್ತದೆ".[31] ಕೆಳಮುಖವಾಗಿ ಇಳಿದುಬರುವ ಈ ಸಿದ್ಧಾಂತವು ಕೂಡಲೇ ಯಶಸ್ವಿಯಾಗಲಿಲ್ಲ. ಏಕೆಂದರೆ ಭಾರತೀಯ ಸಮಾಜದ ಸ್ವರೂಪವು ಬಹುವಾಗಿ ಶ್ರೇಣೀಕೃತವಾಗಿತ್ತು. ಬಹುಪಾಲು ಸುಶಿಕ್ಷಿತ ಜನರು ಸಾಮಾನ್ಯವಾಗಿ ಮೇಲ್ವರ್ಗದ ಜಾತಿಗಳಿಂದ ಬಂದವರಾಗಿರುತ್ತಿದ್ದರು. ಅವರಿಗೆ ಉತ್ತಮ ಕೆಲಸಗಳು ದೊರೆಯುತ್ತಿದ್ದವು. ಅವರು ತಮ್ಮ ತಿಳಿವಳಿಕೆಗಳನ್ನು ಜನಸಮುದಾಯದೊಡನೆ ಹಂಚಿಕೊಳ್ಳುವ ಬದಲು ತಮ್ಮದೇ ಹಿತಾಸಕ್ತಿಗಳನ್ನು ಉತ್ತಮಪಡಿಸಿಕೊಳ್ಳುವಲ್ಲಿ ಮಗ್ನರಾಗಿರುತ್ತಿದ್ದರು.

ಪ್ರೌಢಶಾಲೆ ಮತ್ತು ವಿಶ್ವವಿದ್ಯಾಲಯದ ಬೋಧನೆಗಳಲ್ಲಿ ಪರೀಕ್ಷೆಗಳ ಬಗೆಗೆ ಅತಿಯಾದ ಒತ್ತು ಕೊಡಲಾಗುತ್ತಿತ್ತು. ಉರುಹಚ್ಚಲು ಮತ್ತು ಗಿಣಿಪಾಠ ಒಪ್ಪಿಸಲು ಉತ್ತೇಜನ ನೀಡಲಾಗುತ್ತಿತ್ತು. ಪಾಠಗಳನ್ನು ಯಾಂತ್ರಿಕವಾಗಿ ಹೇಳಿಕೊಡಲಾಗುತ್ತಿತ್ತು. ವಿದ್ಯಾರ್ಥಿಗಳು ಉರುಹಚ್ಚಿ ಪರೀಕ್ಷೆಯಲ್ಲಿ ಹಾಗೇ ಬರೆಯುತ್ತಿದ್ದರು. ಹತ್ತೊಂಬತ್ತನೆಯ ಶತಮಾನ ಮತ್ತು ಇಪ್ಪತ್ತನೆಯ ಶತಮಾನದ ಪ್ರಾರಂಭದಲ್ಲಿ ಬ್ರಿಟನ್ನಿನ ಪ್ರಾಥಮಿಕ ಶಾಲೆಗಳಲ್ಲಿ ಇದೇ ರೀತಿಯ ಬೋಧನಾ ವಿಧಾನವು ದೇಶೀಯ ಶಿಕ್ಷಣ ಪದ್ಧತಿಯಲ್ಲಿ ಪ್ರಚಲಿತವಾಗಿತ್ತು.[32] ಕುತೂಹಲವನ್ನು ಬೆಳೆಸುವುದರ ಕಡೆಗೆ ಮತ್ತು ಪ್ರಯೋಗಶೀಲ ಪ್ರವೃತ್ತಿಯ ಕಡೆಗೆ ಒಲವನ್ನು

ಪೋಷಿಸಲಿಲ್ಲ. ಮಾಹಿತಿ ಸಂಗ್ರಹದ ಮೇಲೆ ಅತಿಯಾದ ಒತ್ತು ಕೊಡಲಾಗಿತ್ತು. ವಿದ್ಯಾರ್ಥಿಯ ಸಮಸ್ಯಾ ಪರಿಹಾರ ಸಾಮರ್ಥ್ಯ ಅಥವಾ ನಿರ್ಣಾಯಕ ಶಕ್ತಿಯನ್ನು ಬೆಳೆಸುವುದಕ್ಕೆ ಯಾವುದೇ ಪ್ರಯತ್ನವನ್ನೂ ಮಾಡಲಿಲ್ಲ. ತರಬೇತಿ ಪಡೆದ ಶಿಕ್ಷಕರ ಕೊರತೆಯಿಂದಾಗಿ ಬೋಧನೆಯ ಗುಣಮಟ್ಟ ಕೂಡ ಕುಗ್ಗಿತ್ತು. ಪ್ರಾಥಮಿಕ ಮತ್ತು ಮಾಧ್ಯಮಿಕ ಹಂತಗಳೆರಡರಲ್ಲೂ ಶಾಲಾ ಶಿಕ್ಷಕರ ತರಬೇತಿಯನ್ನು ನಿರ್ಲಕ್ಷಿಸಲಾಗಿತ್ತು. 1936-37 ನೇ ಸಾಲಿನಲ್ಲಿ ಸರ್ಕಾರಿ ಪ್ರಾರ್ಥಮಿಕ ಶಾಲೆಗಳಲ್ಲಿ ತರಬೇತಿ ಪಡೆದ ಪುರುಷ ಶಿಕ್ಷಕರ ಪ್ರಮಾಣ 57.0% ಇತ್ತು ಮತ್ತು ತರಬೇತಿ ಪಡೆದ ಮಾಧ್ಯಮಿಕ ಶಾಲೆಯ ಶಿಕ್ಷಕರ ಪ್ರಮಾಣ 57.2% ಇತ್ತು. ಅವರಲ್ಲಿ ಕೇವಲ 23.1% ಮಂದಿ ಯಾವುದೇ ವಿಶ್ವವಿದ್ಯಾಲಯದ ಪದವಿಯನ್ನು ಹೊಂದಿದ್ದರು.[33] ಅನುದಾನಿತ ಮತ್ತು ಅನುದಾನರಹಿತ ಶಾಲೆಗಳಲ್ಲಿ ಪರಿಸ್ಥಿತಿ ಇನ್ನೂ ಅಧ್ವಾನವಾಗಿತ್ತು.[34] ತರಬೇತಿ ಪಡೆದ ಶಿಕ್ಷಕರು ಕೂಡ ಉತ್ತಮ ದಕ್ಷತೆಯನ್ನು ಹೊಂದಿದವರಾಗಿರಲಿಲ್ಲ. ಅವರ ವೇತನ ತೀರ ಕಡಿಮೆಯಾಗಿತ್ತು. ಸಾಮಾನ್ಯವಾಗಿ ಸರ್ಕಾರಿ ಸೇವೆ ಅಥವಾ ಕಾನೂನು ವೃತ್ತಿಗೆ ಸೇರಲಾಗದವರು ಶಿಕ್ಷಕರಾಗುತ್ತಿದ್ದರು.

ಶಿಕ್ಷಣದ ವಿಷಯಗಳ ಬಗೆಗೆ ಹೇಳುವುದಾದರೆ ಭಾಷೆಗಳು ಮತ್ತು ಮಾನವಿಕಗಳ ಅಧ್ಯಯನಕ್ಕೆ ಅತಿರೇಕದ ಒತ್ತನ್ನು ಕೊಡಲಾಗಿತ್ತು.[35] ವುಡ್‌ನ ಲಿಖಿತ ಓಲೆಯಲ್ಲಿ ಪಾಶ್ಚಾತ್ಯ ವಿಜ್ಞಾನದ ಪ್ರಸರಣಕ್ಕೆ ನಿರ್ದಿಷ್ಟವಾದ ಸೂಚನೆಯನ್ನು ನೀಡಿದ್ದ; ಭಾರತೀಯ ಶಿಕ್ಷಣ ಆಯೋಗ (1882), ಕಲ್ಕತ್ತ ವಿಶ್ವವಿದ್ಯಾಲಯ ಆಯೋಗ (1917), ಸಾರ್ಜೆಂಟ್ ಆಯೋಗ (1944) ಮಾಧ್ಯಮಿಕ ಶಾಲೆಯ ಹಂತದಲ್ಲಿ ನಿಸರ್ಗ ವಿಜ್ಞಾನಗಳು ಮತ್ತು ವೃತ್ತಿಪರ ಹಾಗೂ ತಾಂತ್ರಿಕ ವಿಷಯಗಳನ್ನು ಸೇರಿಸಬೇಕು ಎಂದು ಸೂಚಿಸಿದ್ದವು.[36] ಆದರೆ ಈ ಶಿಫಾರಸುಗಳನ್ನು ಕಡೆಗಣಿಸಲಾಗಿತ್ತು. 1947ರ ವರೆಗೂ ಬಂದ ಎಲ್ಲ ಸಮಿತಿಗಳೂ ಪ್ರೌಢಶಾಲೆಗಳಲ್ಲಿ ಹೆಚ್ಚು ವೈವಿಧ್ಯಪೂರ್ಣವಾದ ಪಠ್ಯಕ್ರಮಗಳು ಬೇಕೆಂದು ಮತ್ತೆ ಮತ್ತೆ ಮನವಿಗಳನ್ನು ಸಲ್ಲಿಸಿದವು.[37]

ಮಾತೃಭಾಷೆಯು ಮಾಧ್ಯಮವಾಗಿರುವ ಪ್ರಾಥಮಿಕ ಹಂತದಲ್ಲಿ ಮುಖ್ಯವಾದ ಉದ್ದೇಶವು ಮೂರು 'R' ಗಳನ್ನು (Reading, Writing, Arithmetic) ಹಾಗೂ ಒಂದಿಷ್ಟು ಪ್ರಾಥಮಿಕ ಭೂಗೋಳ, ಚರಿತ್ರೆ ಮತ್ತು ದೈನಂದಿನ ಬಳಕೆಗೆ ಸಂಬಂಧಿಸಿದ ಸರಳ ಸಾಮಾನ್ಯ ಜ್ಞಾನವನ್ನು ಬೋಧಿಸುವುದೇ ಆಗಿತ್ತು.[38] ಬಹುಪಾಲು ಭಾರತೀಯರು ಅಂತಹ ಶಾಲೆಗಳಲ್ಲೇ ಶಿಕ್ಷಣವನ್ನು ಪಡೆಯುತ್ತಿದ್ದರು.[39] ಸುಮಾರು 1875-76 ರವರೆಗೂ ಮಾಧ್ಯಮಿಕ ಶಾಲೆ ಎಂಬ ಶಬ್ದ ಬಳಕೆಯಲ್ಲಿರಲಿಲ್ಲ. ಈ ಶಾಲೆಗಳನ್ನು ಇಂಗ್ಲಿಷ್ ಶಾಲೆಗಳು ಎಂದು ಕರೆಯಲಾಗುತ್ತಿತ್ತು. ಏಕೆಂದರೆ ಅಲ್ಲಿನ ಪಠ್ಯಕ್ರಮದಲ್ಲಿ ಇಂಗ್ಲಿಷ್ ಅತ್ಯಂತ ಮುಖ್ಯವಾದ ವಿಷಯವಾಗಿತ್ತು. ಪಾಶ್ಚಾತ್ಯ ಸಾಹಿತ್ಯ ಮತ್ತು ವಿಜ್ಞಾನವನ್ನು ಕುರಿತು ಒಂದಿಷ್ಟು ತಿಳಿವಳಿಕೆಗಳನ್ನು ನೀಡಲಾಗುತ್ತಿತ್ತು. ಆದರೆ ಯಾವ ಆಧುನಿಕ ಭಾರತೀಯ ಭಾಷೆಯನ್ನೂ ಬೋಧಿಸಲಾಗುತ್ತಿರಲಿಲ್ಲ. ಕ್ರಮೇಣ ಕೆಳಹಂತದ ಶಾಲೆಗಳಲ್ಲಿ ಇಂಗ್ಲಿಷ್ ಅನ್ನು ಶಿಕ್ಷಣ ಮಾಧ್ಯಮವಾಗಿ ಕೈಬಿಡಲಾಯಿತು. ವಿಶೇಷವಾಗಿ ಈ ಶತಮಾನದ ಮೂರನೆಯ ದಶಕದಿಂದ ಮತ್ತು 1947 ರವರೆಗೆ ಬಹುತೇಕ ಸಂಪೂರ್ಣವಾಗಿ ಕೈಬಿಡಲಾಯಿತು. ಆದರೆ ಐರೋಪ್ಯ ಮತ್ತು ಆಂಗ್ಲೋ ಇಂಡಿಯನ್ ಶಾಲೆಗಳಲ್ಲಿ ಇಂಗ್ಲಿಷ್ ಶಿಕ್ಷಣ ಮಾಧ್ಯಮ ಇತ್ತು. ಆದರೆ ಒಂದು ವಿಷಯವಾಗಿ ಇಂಗ್ಲಿಷ್‌ನ ಮಹತ್ವ ಮತ್ತು ಜನಪ್ರಿಯತೆ ಕಡಿಮೆಯಾಗದೇ ಮುಂದುವರಿಯಿತು. ಏಕೆಂದರೆ ಪ್ರೌಢಶಾಲೆಗಳು ಸ್ವಾವಲಂಬಿ ಹಂತಗಳಿಗಿಂತ ಹೆಚ್ಚಾಗಿ ಪೂರ್ವ ಸಿದ್ಧತೆಯ ಮೆಟ್ಟಿಲುಗಳಾಗಿದ್ದವು. ಅಲ್ಲದೆ ಕಾಲೇಜುಗಳಲ್ಲಿ ಶಿಕ್ಷಣ ಮಾಧ್ಯಮವು ಇಂಗ್ಲಿಷ್ ಆಗಿ ಮುಂದುವರಿದಿತ್ತು. ಕಾಲೇಜುಗಳಲ್ಲಿ ಬೋಧಿಸುವುದರ ಬಹುಪಾಲನ್ನು ವಾಸ್ತವವಾಗಿ ಶಾಲೆಗಳಲ್ಲೇ ಬೋಧಿಸಬೇಕಾಗಿತ್ತು. ಇದು ಉನ್ನತ ಶಿಕ್ಷಣದ ಮಾನಕಗಳನ್ನು ಕೆಳಗಿಳಿಸಲು ಕಾರಣವಾಯಿತು.

ಸರ್ಕಾರದ ತಾಟಸ್ತ್ಯನೀತಿ (Laissez faire)ಯನ್ನು ಭಾರತೀಯ ಶಿಕ್ಷಣ ಆಯೋಗವು ಖಚಿತವಾಗಿ ಪ್ರತಿಪಾದಿಸಿತ್ತು (1882). ಇದು ಅಸಂಖ್ಯಾತ ಖಾಸಗಿ ನಿರ್ವಹಣೆಯ ಶಾಲೆಗಳು ಮತ್ತು ಕಾಲೇಜುಗಳ ಸ್ಥಾಪನೆಗೆ ಕಾರಣವಾಯಿತು. ಅವು ಕಡಿಮೆ ಶುಲ್ಕವನ್ನು ವಿಧಿಸುತ್ತಿದ್ದವು. ವಿದ್ಯಾರ್ಥಿಗಳಿಗೆ ಉಚಿತವಾಗಿ ಪ್ರವೇಶವನ್ನು ನೀಡುತ್ತಿದ್ದವು. ಅವುಗಳಲ್ಲಿ ಅನೇಕವು ಅನರ್ಹವಾಗಿದ್ದವು. ಉತ್ತಮ ಕಟ್ಟಡಗಳು ಇರುತ್ತಿರಲಿಲ್ಲ. ಸಾಕಷ್ಟು ಸಿಬ್ಬಂದಿಯೂ ಇರುತ್ತಿರಲಿಲ್ಲ. ಸುಸಜ್ಜಿತವಾಗಿರುತ್ತಿರಲಿಲ್ಲ. ವಿದ್ಯಾರ್ಥಿಗಳ ಸಂಖ್ಯೆ ಮಿತಿಮೀರಿತ್ತು. ಅವು ವಾಸ್ತವದಲ್ಲಿ ಅತಿಯಾದ ವಿದ್ಯಾರ್ಥಿಗಳು ಮತ್ತು ಅತಿ ಕಡಿಮೆ ಬೋಧಿಸುವಿಕೆಯ ಕೋಚಿಂಗ್ ಸಂಸ್ಥೆಗಳಾಗಿದ್ದವು.

ಹತ್ತೊಂಬತ್ತನೆಯ ಶತಮಾನದ ಕೊನೆಯ ವರ್ಷಗಳವರೆಗೂ ಈ ದೋಷಗಳನ್ನು ಗಮನಿಸಲಾಯಿತಾದರೂ, ಈ ಸಮಸ್ಯೆಯು ಬಹಳ ಗಂಭೀರ ಎಂಬಂತೆ ತೋರಲಿಲ್ಲ. ಏಕೆಂದರೆ ಕಾಲೇಜುಗಳು ಮತ್ತು ಪ್ರೌಢಶಾಲೆಗಳು ಇನ್ನೂ ಕಡಿಮೆ ಸಂಖ್ಯೆಯಲ್ಲಿದ್ದವು ಮತ್ತು ಚಿಕ್ಕವಾಗಿದ್ದವು. ಆದರೆ ಅವುಗಳ ಸಂಖ್ಯೆ ಮತ್ತು ಪ್ರವೇಶಾತಿ ಹೆಚ್ಚಾಗುತ್ತಾ ಹೋದಂತೆ ಅನೇಕ ಬ್ರಿಟಿಷ್ ಅಧಿಕಾರಿಗಳು ಗಂಭೀರವಾಗಿ ಆತಂಕಗೊಂಡರು. ಲಾರ್ಡ್ ಕರ್ಜನ್ 1898ರಲ್ಲಿ ಭಾರತಕ್ಕೆ ಆಗಮಿಸಿದ ಮೇಲೆ ಭಾರತೀಯ ಶಿಕ್ಷಣ ವ್ಯವಸ್ಥೆಯು ಅಸ್ತವ್ಯಸ್ತವಾಗಿದೆ; ಅದು ಕೊನೆಗೆ 'ಪಾತಾಳಕ್ಕೆ ಕುಸಿದು ಕೆಸರಿನ ಹೂಳಿನಲ್ಲಿ ಉಸಿರುಗಟ್ಟುವ ಮೊದಲು' ಅದನ್ನು ಹಳ್ಳದಿಂದ ಮೇಲೆತ್ತಬೇಕು ಎಂದು ಭಾವಿಸಿದನು.[40] ಆರಂಭಕಾಲದ ಉತ್ಸಾಹಿಗಳ ಮಹಾನ್ ಆಸೆಗಳು ಮಾಸಿ ಹೋದವು ಮತ್ತು ಶಿಕ್ಷಣವನ್ನು ಹೇಗೆ ಮಾಡಬಾರದು ಎನ್ನುವುದಕ್ಕೆ ಸಾರ್ವಜನಿಕ ಶಿಕ್ಷಣವು ಒಂದು ಉದಾಹರಣೆಯಾಯಿತು. ಶಿಕ್ಷಣದ ಹುರುಳು ಮತ್ತು ರಾಜಕೀಯದ ಪರಿಣಾಮ – ಈ ಎರಡು ಅಂಶಗ ಳು ತೀವ್ರವಾದ ಟೀಕೆಗೆ ಗುರಿಯಾದವು.

ದೇಶದಲ್ಲಿನ ರಾಜಕೀಯ ಅಶಾಂತಿಗೆ ಮೂಲ ಕಾರಣವೇ ಉನ್ನತ ಶಿಕ್ಷಣ ಎಂದು ಲಾರ್ಡ್ ಡಫೆರಿನ್ನನ ಕಾಲದಿಂದ ಪರಿಗಣಿಸಲಾಯಿತು. ಸುಶಿಕ್ಷಿತ ವರ್ಗದವರು ತಮ್ಮ ಟೀಕೆಗಳನ್ನು ಮುಚ್ಚುಮರೆ ಇಲ್ಲದೆ ಹೇಳಲಾರಂಭಿಸಿದರು. ಭಾರತದ ವ್ಯವಸ್ಥೆಯಲ್ಲಿ ಇಂಗ್ಲಿಷ್ ಶಿಕ್ಷಣವನ್ನು ಪ್ರಾರಂಭಿಸುವುದರ ವಿವೇಕವನ್ನು ಕುರಿತ ಹಿಂದಿನ ಶಂಕೆಗಳನ್ನು ಬಲಪಡಿಸಿ ಭಾರತೀಯ ಸನ್ನಿವೇಶದಲ್ಲಿ ಅವು ಉಂಟುಮಾಡಬಹುದಾದ ಅಪಾಯಗಳನ್ನು ಕುರಿತ ಅರಿವಿಗೆ ಹೊಸ ಅಂಶಗಳನ್ನು ಸೇರಿಸಿದವು. ಶಿಕ್ಷಣ ಪದ್ಧತಿಯ ಮೇಲೆ ಆಕ್ರಮಣ ಮಾಡುವಲ್ಲಿ ಕರ್ಜನ್‌ನ ಉದ್ದೇಶವು ಅದನ್ನು ಹೆಚ್ಚು ಸಮರ್ಥವನ್ನಾಗಿ ಮಾಡುವುದಷ್ಟೇ ಅಲ್ಲ, ರಾಜಕೀಯವಾಗಿ ಸರ್ಕಾರವೂ ಸುರಕ್ಷಿತವಾಗಿರಬೇಕು ಎನ್ನುವುದು. ಸರ್ಕಾರವು ಶಿಕ್ಷಣದಲ್ಲಿ ಹಸ್ತಕ್ಷೇಪ ಮಾಡಬಾರದು ಎಂಬ ಸಿದ್ಧಾಂತವನ್ನು ಕರ್ಜನ್ ವಿದ್ಯುಕ್ತವಾಗಿ ಕೈಬಿಟ್ಟ. ವಾಸ್ತವದಲ್ಲಿ, ಸರ್ಕಾರವೊಂದೇ ಸುಧಾರಣೆಗಳನ್ನು ತರಬಲ್ಲದು ಎಂದು ಅವನು ಒತ್ತಿ ಹೇಳಿದ. ವಿಕೇಂದ್ರೀಕರಣ ಮಾಡಬೇಕೆಂಬ ಅಪೇಕ್ಷೆಯಲ್ಲಿ ಸರ್ಕಾರವು ತನ್ನ ನಿಯಂತ್ರಣವನ್ನು ಅಪಾಯಕಾರಿಯಾದ ಮಟ್ಟಕ್ಕೆ ಬಿಟ್ಟುಕೊಟ್ಟಿದೆ ಎಂದು ಅವನು ಭಾವಿಸಿದ. ತತ್ಪರಿಣಾಮವಾಗಿ ಭಾರತೀಯರು ಈಗ ಅಧಿಪತ್ಯವನ್ನು ಹಿಡಿದಿದ್ದಾರೆ ಮತ್ತು "ಸರ್ಕಾರದ ಕಿಡಿಗೇಡಿತನದ ಸ್ವಾತಂತ್ರ್ಯವನ್ನು" ತೋರುತ್ತಿದ್ದಾರೆ.[41] ಭಾರತೀಯರು ನಿರ್ವಹಿಸುತ್ತಿರುವ ಬಹಳಷ್ಟು ಶಾಲೆಗಳು ಮತ್ತು ಕಾಲೇಜುಗಳಿವೆ, ಸೆನೆಟ್‌ಗಳಲ್ಲಿ ಬಹಳಷ್ಟು 'ಅಪಶಿಕ್ಷಣ ಪಡೆದ ವಕೀಲರಿದ್ದಾರೆ', ಮತ್ತು ಪಠ್ಯಪುಸ್ತಕ ಸಮಿತಿಗಳಲ್ಲಿ ಬಹಳಷ್ಟು ಬಾಬುಗಳಿದ್ದಾರೆ.[42] "ಪರಿತ್ಯಜಿಸುವ ಪ್ರವೃತ್ತಿಯಿರುವ ಸರ್ಕಾರದ ಜವಾಬ್ದಾರಿಯನ್ನು" ಅವನು ಮತ್ತೆ ಒತ್ತಿಹೇಳಲು ಬಯಸಿದ್ದನು.[43] ಅವನ ಪೂರ್ವಾಧಿಕಾರಿಗಳು ಕೇವಲ ಧೈರ್ಯದ ಕೊರತೆಯಿಂದ ವಿಶ್ವವಿದ್ಯಾಲಯದ ಶಿಕ್ಷಣವು ತಮ್ಮ ಕೈಮೀರಿ ಹೋಗಲು ಬಿಟ್ಟಿದ್ದರು ಎಂದು ಅವನು ಭಾವಿಸಿದ್ದನು. ಅವುಗಳನ್ನು ಸುಧಾರಿಸದೆ ಬಿಟ್ಟರೆ ಭಾರತದ ವಿಶ್ವವಿದ್ಯಾಲಯಗಳು "ಅತೃಪ್ತ ವ್ಯಕ್ತಿಗಳ ಮತ್ತು ಕುಂಠಿತ ಮೆದುಳಿನ ಪೋಷಣ-ಸ್ಥಾನ ಗಳಾಗುತ್ತವೆ."[44] ಅವನು 1901ರಲ್ಲಿ ಸಿಮ್ಲಾದಲ್ಲಿ ಒಂದು ಸಮಾವೇಶವನ್ನು ಏರ್ಪಡಿಸಿ ಸಾರ್ವಜನಿಕ ಶಿಕ್ಷಣ

ಇಲಾಖೆಯ ಎಲ್ಲ ನಿರ್ದೇಶಕರಿಗೆ ಹಾಜರಾಗಲು ಆದೇಶ ನೀಡಿದ; ಹೊಸ ಶಿಕ್ಷಣ ನೀತಿಯನ್ನು ರೂಪಿಸುವ ಕಾರ್ಯವನ್ನು ಕೈಗೊಂಡ. ಇದನ್ನು ಅನುಸರಿಸಿ 1902ರಲ್ಲಿ ಭಾರತೀಯ ವಿಶ್ವವಿದ್ಯಾಲಯಗಳ ಆಯೋಗಕ್ಕೆ ಸರ್ ಥಾಮಸ್ ರಾಲೀಯನ್ನು ಅಧ್ಯಕ್ಷನನ್ನಾಗಿ ನೇಮಕ ಮಾಡಿದ. ಆಯೋಗವು ವಿಶ್ವವಿದ್ಯಾಲಯದ ಸೆನೆಟ್‌ಗಳ ಗಾತ್ರವನ್ನು ಕಡಿಮೆ ಮಾಡಲು ಮತ್ತು ಕಾಲೇಜುಗಳ ಸೇರ್ಪಡೆಯ ನಿಯಮಗಳನ್ನು ಹೆಚ್ಚು ಕಟ್ಟುನಿಟ್ಟಾಗಿ ಮಾಡಲು ಪ್ರಸ್ತಾವನೆ ಮಾಡಿತು. ಆಯೋಗದ ಈ ಶಿಫಾರಸುಗಳು 1904ರ ಭಾರತೀಯ ವಿಶ್ವವಿದ್ಯಾಲಯಗಳ ಅಧಿನಿಯಮವನ್ನು ರೂಪಿಸಲು ದಾರಿಯಾದವು. ಅದು ವಿಶ್ವವಿದ್ಯಾಲಯದ ಆಡಳಿತವನ್ನು ಸುಗಮಗೊಳಿಸಿತು. ವಿಶ್ವವಿದ್ಯಾಲಯದ ಬೋಧನಾ ಮಟ್ಟವನ್ನು ಕೆಲಮಟ್ಟಿಗೆ ಬಲಗೊಳಿಸಿತು.

ಸುಶಿಕ್ಷಿತ ಭಾರತೀಯರು ಗುಣಮಟ್ಟದ ನಿಯಂತ್ರಣ ಮತ್ತು ಸುಧಾರಣೆಯ ನೀತಿಯನ್ನು ಒಪ್ಪಲಿಲ್ಲ. ಇಂಗ್ಲಿಷ್ ಶಿಕ್ಷಣದ ವ್ಯಾಪಕ ಪ್ರಸರಣವು, ಕೆಲವು ಸಂದರ್ಭಗಳಲ್ಲಿ ಸಾಮಾನ್ಯ ಮಟ್ಟಕ್ಕೆ ಸಮನಾಗಿಲ್ಲದಿದ್ದರೂ, ಮುಖ್ಯವಾದದ್ದೆಂಬುದು ಅವರ ನಿಲುವಾಗಿತ್ತು. ಫಿರೋಜ್‌ಷಾ ಮೆಹ್ತಾ, ಗೋಪಾಲಕೃಷ್ಣ ಗೋಖಲೆ ಮತ್ತು ಇತರರು ಕರ್ಜನ್‌ನ ವಿಶ್ವವಿದ್ಯಾಲಯ ಮಸೂದೆಯನ್ನು ಕಟು ವಿಮರ್ಶೆಗೆ ಗುರಿಮಾಡಿದರು. ಏಕೆಂದರೆ ಅದು ಅಧಿಕೃತ ನಿಯಂತ್ರಣವನ್ನು ಹೆಚ್ಚು ಮಾಡುತ್ತದೆ ಮತ್ತು ಉನ್ನತ ಶಿಕ್ಷಣದ ಬೆಳವಣಿಗೆಯನ್ನು ನಿಯಂತ್ರಿಸುತ್ತದೆ.[45] ಕರ್ಜನ್‌ನ ವಿಶ್ವವಿದ್ಯಾಲಯಗಳ ಅಧಿನಿಯಮವು (1904) ಬಿರುಗಾಳಿಯನ್ನೆಬ್ಬಿಸಿದರೂ ವಾಸ್ತವವಾಗಿ ತರಲಾದ ಬದಲಾವಣೆಗಳು ತೀರ ಚಿಕ್ಕದಾಗಿದ್ದವು. "ವೈಸ್‌ರಾಯ್ ಅದಕ್ಕಾಗಿ ವಿನಿಯೋಗಿಸಿದ ಸಮಯ ಮತ್ತು ಚಿಂತನೆ ಅಥವಾ ವಿರೋಧದ ತೀವ್ರತೆಗೆ ಹೋಲಿಸಿದರೆ ಈ ಬದಲವಣೆಗಳು ಚಿಕ್ಕವೆ."[46] ರಾಲೀ ಆಯೋಗ ಮತ್ತು 1904ರ ಅಧಿನಿಯಮಗಳೆರಡೂ ಉನ್ನತ ಶಿಕ್ಷಣ ದಿಕ್ಕನ್ನಾಗಲಿ ಅಥವಾ ಗುಣವಿಶೇಷಣಗಳನ್ನಾಗಲಿ ಪ್ರಭಾವಿಸುವಲ್ಲಿ ವಿಫಲವಾದವು.

1917ರಲ್ಲಿ ಸರ್ ಮೈಕೇಲ್ ಸ್ಯಾಡ್ಲರ್ ಭಾರತದ ಶಿಕ್ಷಣದ ಪರಿಸ್ಥಿತಿಯನ್ನು ನೋಡಿ ಗಂಭೀರವಾದ ಆಘಾತಕ್ಕೆ ತುತ್ತಾದನು. ಅವನು ಮತ್ತು ಕಲ್ಕತ್ತ ವಿಶ್ವವಿದ್ಯಾಲಯ ಆಯೋಗದ ಅವನ ಸಹೋದ್ಯೋಗಿಗಳು (1917-19) ಬಂಗಾಳದ ವಿಶ್ವವಿದ್ಯಾಲಯ ಪದ್ಧತಿಯು, "ಬಹುಪಾಲು ಪ್ರತಿಯೊಂದು ಅಂಶಗಳಲ್ಲಿಯೂ ಮೂಲತಃ ದೋಷಪೂರಿತವಾಗಿತ್ತು" ಎಂದು ಒಂದು ವ್ಯಾಪಕವಾದ ವಿಚಾರಣೆಯ ಅನಂತರ ಕಂಡುಕೊAಡರು.[47] 1929ರಲ್ಲಿ ಸರ್ ಫಿಲಿಪ್ ಹಾರ್ಟೋಗ್ ಅಧ್ಯಕ್ಷತೆಯ ಸಮಿತಿ[48] ಮತ್ತು 1948ರಲ್ಲಿ ರಾಧಾಕೃಷ್ಣನ್ ಆಯೋಗ ಕೆಳಮಟ್ಟ ಮತ್ತು ನಿಕೃಷ್ಟ ಗುಣವನ್ನು ಕುರಿತು ದೂರಿದವು.[49]

ಈ ಶತಮಾನದ ಆರಂಭದ ವರ್ಷಗಳವರೆಗೂ ಇದೇ ಪದ್ಧತಿಯು ಬಹುಪಾಲು ಸುಶಿಕ್ಷಿತ ಭಾರತೀಯರಿಗೆ ತೃಪ್ತಿಯನ್ನು ನೀಡಿದ್ದಂತೆ ತೋರಿತು. ಆರಂಭದಲ್ಲಿ ಬಹುತೇಕ ಕುರುಡು ಮೆಚ್ಚಿಗೆ ಇತ್ತು. ಅನಂತರ ಕ್ರಮೇಣವಾಗಿ ಅನೇಕ ಭಾರತೀಯರ ನಿಲವು ಬೆಳೆಯುತ್ತಾ ಹೋದ ಅತೃಪ್ತಿಯ ಕಡೆಗೆ ತಿರುಗಿತು. ಅನೇಕ ಶೈಕ್ಷಣಿಕ ಆಂದೋಲನಗಳು ಪ್ರಾರಂಭವಾದವು. ಇವು ಇಂಗ್ಲಿಷಿನ ಸ್ಥಾನದಲ್ಲಿ ಮಾತೃಭಾಷೆಯನ್ನು ತರಬೇಕು ಎನ್ನುವ ಕಡೆ ನಿರ್ದೇಶಿತವಾಗಿದ್ದವು. ಆರ್ಯಸಮಾಜಿಗಳು 1902ರಲ್ಲಿ ಹರಿದ್ವಾರದಲ್ಲಿ ಒಂದು ಗುರುಕುಲವನ್ನು ಸ್ಥಾಪಿಸಿದರು. ಅಲ್ಲಿ ಸಂಸ್ಕೃತಕ್ಕೆ ಪ್ರಾಧಾನ್ಯ ಕೊಡಲಾಗಿತ್ತು. ಹಿಂದಿಯನ್ನು ಶಿಕ್ಷಣ ಮಾಧ್ಯಮವನ್ನಾಗಿ ಬಳಸಲಾಗಿತ್ತು.[50] ಇದಕ್ಕೆ ಒಂದು ವರ್ಷದ ಮೊದಲು ರವೀಂದ್ರನಾಥ ಠಾಕೂರರು ಶಾಂತಿನಿಕೇತನದಲ್ಲಿ ತಮ್ಮ ಪ್ರಾಯೋಗಿಕ ಶಾಲೆಯನ್ನು ಪ್ರಾರಂಭಿಸಿದ್ದರು. ಅಲ್ಲಿ ಬಂಗಾಳಿ ಭಾಷೆಯಲ್ಲಿ ಬೋಧನೆಯನ್ನು ಮಾಡಲಾಗುತ್ತಿತ್ತು.[51] ಉನ್ನತ ಶಿಕ್ಷಣಕ್ಕೆ ಹೆಚ್ಚುವರಿ ನಿಧಿಯನ್ನು ಕೊಡಬೇಕು ಮತ್ತು ಸೌಕರ್ಯಗಳನ್ನು ಕೊಡಬೇಕು ಎಂಬ ವಿಷಯದಲ್ಲಿ ಪ್ರಧಾನವಾಗಿ ಆಸಕ್ತರಾಗಿದ್ದ ಸುಶಿಕ್ಷಿತ ಗಣ್ಯರು ಉಚಿತ ಕಡ್ಡಾಯ ಪ್ರಾಥಮಿಕ ಶಿಕ್ಷಣಕ್ಕಾಗಿ ಹಕ್ಕೊತ್ತಾಯ ಮಾಡಿಸತೊಡಗಿದರು.[52] ಈ ನಿಟ್ಟಿನಲ್ಲಿ ಒಂದು

ಗಂಭೀರ ಪ್ರಯತ್ನ ಪ್ರಾರಂಭಿಸಬೇಕೆಂದು ಗೋಪಾಲಕೃಷ್ಣ ಗೋಖಲೆಯವರು ಇಂಪೀರಿಯಲ್ ಲೆಜಿಸ್ಲೇಟಿವ್ ಕೌನ್ಸಿಲ್‌ನಲ್ಲಿ ಒಂದು ಮಸೂದೆಯನ್ನು ಮಂಡಿಸಿದರು.[53] ಆದರೆ ಅದು ಅಕಾಲಿಕ ಮತ್ತು ಆರ್ಥಿಕವಾಗಿ ಅಭದ್ರ ಎಂಬ ಕಾರಣಕ್ಕಾಗಿ ಸರ್ಕಾರವು ಅದನ್ನು ವಿರೋಧಿಸಿತು.[54]

1880ನೇ ದಶಕದಿಂದಲೂ ಸುಶಿಕ್ಷಿತ ಭಾರತೀಯರು ತಾಂತ್ರಿಕ ಶಿಕ್ಷಣಕ್ಕಾಗಿ ಸರ್ಕಾರವು ಹೆಚ್ಚು ವೆಚ್ಚ ಮಾಡಬೇಕು ಎಂದು ಒತ್ತಾಯ ಮಾಡುತ್ತಿದ್ದರು.[55] 1887ರಲ್ಲಿ ಬಹುಪಾಲು ಖಾಸಗಿ ಪ್ರಯತ್ನಗಳಿಂದ ವಿಕ್ಟೋರಿಯ ಜೂಬಿಲಿ ಟೆಕ್ನಿಕಲ್ ಇನ್ಸ್‌ಟಿಟ್ಯೂಟ್ ಅನ್ನು ಬಾಂಬೆಯಲ್ಲಿ ಸ್ಥಾಪಿಸಲಾಯಿತು. ಭಾರತೀಯರು ವೈಜ್ಞಾನಿಕ ಮತ್ತು ತಾಂತ್ರಿಕ ಶಿಕ್ಷಣದಲ್ಲಿ ಪ್ರಗತಿಯನ್ನು ಸಾಧಿಸಬೇಕೆಂದು 1904ರಲ್ಲಿ ಕಲ್ಕತ್ತದಲ್ಲಿ ಒಂದು ಸಂಘವನ್ನು ಸ್ಥಾಪಿಸಲಾಗಿತ್ತು. ಅದರ ಮುಖ್ಯ ಉದ್ದೇಶವು ವಿದ್ಯಾರ್ಥಿಗಳನ್ನು ಜಪಾನ್, ಅಮೆರಿಕ ಮತ್ತು ಬೇರೆ ಬೇರೆ ಐರೋಪ್ಯ ದೇಶಗಳಿಗೆ ಕಳಿಸುವುದಾಗಿತ್ತು.[56] ಇದೇ ಉದ್ದೇಶವನ್ನು ದೃಷ್ಟಿಯಲ್ಲಿ ಇಟ್ಟುಕೊಂಡು 'ನ್ಯಾಷನಲ್ ಫಂಡ್ ಅಂಡ್ ಇಂಡಸ್ಟ್ರಿಯಲ್ ಅಸೋಸಿಯೇಷನ್ ಆಫ್ ಮದ್ರಾಸ್' ಮತ್ತು 'ಇಂಡಿಯನ್ ಇಂಡಸ್ಟ್ರಿಯಲ್ ಡೆವೆಲಪ್‌ಮೆಂಟ್ ಸ್ಕೀಮ್ ಇನ್ ಬಾಂಬೆ' ಸಂಸ್ಥೆಗಳನ್ನು ಸ್ಥಾಪಿಸಲಾಯಿತು. ಬಂಗಾಳದಲ್ಲಿ ಸ್ವದೇಶಿ ಆಂದೋಲನದ ಮುಖಂಡರು 1907ರಲ್ಲಿ ಜಾಧವಪುರದಲ್ಲಿ ಇಂಜಿನಿಯರಿಂಗ್ ಅಂಡ್ ಟೆಕ್ನಾಲಜಿ ಕಾಲೇಜನ್ನು ಸ್ಥಾಪಿಸಿದರು. ಅದು 1908ರಲ್ಲಿ 'ಡಿಪ್ಲೋಮಾ ಇನ್ ಮೆಕ್ಯಾನಿಕಲ್ ಇಂಜಿನಿಯರಿಂಗ್' ಮತ್ತು 1921ರಲ್ಲಿ 'ಡಿಪ್ಲೋಮಾ ಇನ್ ಕೆಮಿಕಲ್ ಇಂಜಿನಿಯರಿAಗ್' ಪದವಿಗಳನ್ನು ನೀಡಲು ಪ್ರಾರಂಭಿಸಿತು.[57]

ಅಸ್ತಿತ್ವದಲ್ಲಿರುವ ಶಾಲೆಗಳು ಮತ್ತು ಕಾಲೇಜುಗಳು ನೀಡುತ್ತಿರುವ ಶಿಕ್ಷಣವು ದೇಶಭಕ್ತಿಯ ಭಾವನೆಗಳನ್ನು ಅಥವಾ ವ್ಯಕ್ತಿಗೆ ತನ್ನ ದೇಶದ ಬಗೆಗೆ ಹೆಮ್ಮೆಯನ್ನು ಬೆಳೆಸುವತ್ತ ಕರೆದೊಯ್ಯುತ್ತಿಲ್ಲ ಎಂಬ ಭಾವನೆಯು ಅನೇಕ ರಾಷ್ಟ್ರೀಯವಾದಿಗಳಲ್ಲಿ ಮೂಡಿತ್ತು. ಇದನ್ನು ಸರಿಪಡಿಸಲೆಂದು ಶತಮಾನವು ಬದಲಾಗುತ್ತಿರುವ ಸಮಯದಲ್ಲಿ ಬಂಗಾಳ ಮತ್ತು ಮಹಾರಾಷ್ಟ್ರಗಳಲ್ಲಿ 'ದೇಶೀಯ ಶಾಲೆಗಳನ್ನು' ಪ್ರಾರಂಭಿಸಲಾಯಿತು.[58] ಅನಂತರ ಮಹಾತ್ಮಗಾಂಧಿ ಅವರು ತಮ್ಮ ಮೊದಲ ಅಸಹಕಾರ ಚಳವಳಿಯನ್ನು ಪ್ರಾರಂಭಿಸಿ, ವಿದ್ಯಾರ್ಥಿಗಳು ಸರ್ಕಾರಿ ಶಾಲೆಗಳು ಮತ್ತು ಕಾಲೇಜುಗಳನ್ನು ಬಹಿಷ್ಕರಿಸಬೇಕೆಂದು ಕರೆಕೊಟ್ಟರು.[58] ಅಲ್ಲದೆ ಗಾಂಧೀಜಿ ದೈಹಿಕ ಕಾರ್ಯವನ್ನು ತೊರೆದು ಕೇವಲ ಓದುವುದಕ್ಕೆ ಸೀಮಿತವಾಗಿದ್ದ ಶಿಕ್ಷಣ ಪದ್ಧತಿಯನ್ನು ಖಂಡಿಸಿದರು. ಇದನ್ನು ದೃಷ್ಟಿಯಲ್ಲಿಟ್ಟುಕೊಂಡು ಅವರು ಮೂಲ ಶಿಕ್ಷಣ ಅಥವಾ ವಾರ್ಧಾ ಯೋಜನೆಯನ್ನು ಪ್ರಾರಂಭಿಸಿದರು. ಅದರಲ್ಲಿ ಎಂಟು ವರ್ಷಗಳ ಕಾಲ ಮಾತೃಭಾಷೆಯಲ್ಲಿ ಉಚಿತ ಕಡ್ಡಾಯ ಶಿಕ್ಷಣವನ್ನು ರೂಪಿಸಲಾಗಿತ್ತು. ಅದರಲ್ಲಿ ಪಠ್ಯಕ್ರಮವನ್ನು ದೈಹಿಕ ಮತ್ತು ಉತ್ಪಾದಕ ಕಾರ್ಯದ ಸುತ್ತ ವ್ಯವಸ್ಥೆಗೊಳಿಸಲಾಗಿತ್ತು.[60]

ಅನಂತರ ಸಮಿತಿಗಳು ಮತ್ತು ಆಯೋಗಗಳು ಗುಣಮಟ್ಟವನ್ನು ಸುಧಾರಿಸಬೇಕು ಮತ್ತು ಗಾತ್ರ ವಿಸ್ತರಣೆಯನ್ನು ನಿಯಂತ್ರಿಸಬೇಕು ಎಂದು ಒತ್ತಿ ಹೇಳಿದರೂ ಸಂಸ್ಥೆಗಳು ಮತ್ತು ಶಿಕ್ಷಣ ಪಡೆಯುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ ನಿರಂತರವಾಗಿ ಹೆಚ್ಚಾಗುತ್ತಲೇ ಹೋಯಿತು. ಕೋಷ್ಟಕ-1 ರಲ್ಲಿ 1855 ರಿಂದ 1947ರ ವರೆಗಿನ ಸುಮಾರು ನೂರು ವರ್ಷಗಳ ಅವಧಿಯಲ್ಲಿನ ಶಿಕ್ಷಣ ಸಂಸ್ಥೆಗಳು ಮತ್ತು ವಿದ್ಯಾರ್ಥಿಗಳ ದಾಖಲಾತಿಯ ಅಂಕಿ ಅಂಶಗಳನ್ನು ಕೊಡಲಾಗಿದೆ. ಇದರಿಂದ ಅನೇಕ ತೀರ್ಮಾನಗಳು ಹೊರ ಹೊಮ್ಮುತ್ತವೆ. ಬೆಳವಣಿಗೆಯ ಸರಳ ಸಂಗತಿಯು ಇಲ್ಲಿ ಸುವ್ಯಕ್ತವಾಗಿದೆ.

**ಕೋಷ್ಟಕ-1**

(ಎ) ಶಿಕ್ಷಣ ಸಂಸ್ಥೆಗಳು

| | | 1855-56 | 1901-02 | 1921-22 | 1946-47 |
|---|---|---|---|---|---|
| 1. | ವಿಶ್ವ ವಿದ್ಯಾಲಯಗಳು | - | 5 | 14 | 17 |
| 2. | ಸಾಮಾನ್ಯ ಶಿಕ್ಷಣದ ಕಾಲೇಜುಗಳು | 21 | 145 | 172 | 496 |
| 3. | ವೃತ್ತಿ ಮತ್ತು ಇತರ ಶಿಕ್ಷಣದ ಕಾಲೇಜುಗಳು | 13 | 46 | 74 | 130 |
| 4. | ಸೆಕೆಂಡರಿ ಶಾಲೆಗಳು (ಸಾಮಾನ್ಯ) | 281 | 1,170 | 1,248 | 5,297 |
| 5. | ಸೆಕೆಂಡರಿ ಶಾಲೆಗಳು (ವೃತ್ತಿ ಮತ್ತು ತಾಂತ್ರಿಕ) | - | 94 | 292 | 665 |
| 6. | ವಿಶೇಷ ಮತ್ತು ಇತರ ಶಾಲೆಗಳು | 7 | 990 | 3,729 | 4,746 |
| 7. | ಮಾಧ್ಯಮಿಕ ಶಾಲೆಗಳು | | 4,323 | 6,739 | 11,162 |
| 8. | ಪ್ರಾಥಮಿಕ ಶಾಲೆಗಳು | 50,676 | 97,854 | 1,60,070 | 1,72,681 |
| | **ಒಟ್ಟು** | **50,998** | **1,04,627** | **1,72,338** | **1,95,194** |

**(ಬಿ) ಹಂತಗಳಲ್ಲಿ ದಾಖಲಾತಿ**

| | | 1855-56 | 1901-02 | 1921-22 | 1946-47 |
|---|---|---|---|---|---|
| 1. | ವಿಶ್ವ ವಿದ್ಯಾಲಯಗಳು<br>(i) ಒಟ್ಟು<br>(ii) ಬಾಲಕಿಯರು | 4,355<br>ಅನ್ವಯಿಸುವುದಿಲ್ಲ | 23,007<br>264 | 58,837<br>1,529 | 2,37,546<br>23,207 |
| 2. | ಸೆಕೆಂಡರಿ ಹಂತ<br>(i) ಒಟ್ಟು<br>(ii) ಬಾಲಕಿಯರು | 33,801<br>ಅನ್ವಯಿಸುವುದಿಲ್ಲ | 82,312<br>1,677 | 2,18,606<br>5,818 | 3,70,812<br>82,250 |
| 3. | ಮಾಧ್ಯಮಿಕ ಶಾಲೆಯ ಹಂತ<br>(i) ಒಟ್ಟು<br>(ii) ಬಾಲಕಿಯರು | -<br>1 | 10,80,670<br>8,133 | 3,85,372<br>24,655 | 2,036,109<br>2,81,606 |

| | | | | | |
|---|---|---|---|---|---|
| 4. | ಪ್ರಾಥಮಿಕ ಶಾಲೆಯ ಹಂತ<br>(i) ಒಟ್ಟು<br>(ii) ಬಾಲಕಿಯರು | 8,85,624<br>- | 35,64,122<br>3,80,282 | 64,04,200<br>12,97,643 | 1,41,05,418<br>37,28,793 |
| 5. | ಎಲ್ಲ ಹಂತಗಳ ಒಟ್ಟು ದಾಖಲಾತಿ:<br>(i) ಒಟ್ಟು<br>(ii) ಬಾಲಕಿಯರು | 9,23,780<br>ಅನ್ವಯಿಸುವುದಿಲ್ಲ | 38,86,493<br>3,93,161 | 72,07,308<br>13,40,842 | 1,77,50,263<br>41,56,742 |

ವಿವಿಧ ಹಂತಗಳಲ್ಲಿ ಏರುಪೇರುಗಳಿದ್ದರೂ ಈ ವರ್ಷಗಳ ಉದ್ದಕ್ಕೂ ನಿರಂತರವಾಗಿ ಹೆಚ್ಚಳವನ್ನೇ ನೋಡಬಹುದು. 1813 ಮತ್ತು 1854ರ ನಡುವೆ ಅದು ನಿಧಾನವಾಗಿದೆ. ಏಕೆಂದರೆ ಈ ವರ್ಷಗಳನ್ನು ಗುರಿಗಳು, ವಿಧಾನಗಳು, ಹುರುಳು ಮತ್ತು ಸಂಘಟನೆಗೆ ಸಂಬಂಧಿಸಿದ ವಿವಾದಗಳಲ್ಲಿಯೇ ಕಳೆಯಲಾಯಿತು. ನಿಜವಾದ ಬೆಳವಣಿಗೆಯು ಶಿಕ್ಷಣ ಇಲಾಖೆಗಳ ಸೃಷ್ಟಿ (1855) ಮತ್ತು ವಿಶ್ವವಿದ್ಯಾಲಯಗಳ ಸ್ಥಾಪನೆಯೊಂದಿಗೆ (1857) ಪ್ರಾರಂಭವಾಯಿತು. 1855 ಮತ್ತು 1901ರ ನಡುವೆ ಎಲ್ಲ ಹಂತಗಳಲ್ಲಿ ಏಕಪ್ರಕಾರವಾದ ಬೆಳವಣಿಗೆಯಾಯಿತು. ವಿಶೇಷವಾಗಿ ಹಂಟರ್ ಆಯೋಗವು (1882) ಭಾರತೀಯ ಖಾಸಗಿ ಪ್ರಯತ್ನಕ್ಕೆ ಪ್ರೋತ್ಸಾಹ ನೀಡುವ ಶಿಫಾರಸುಗಳನ್ನು ಮಾಡಿದ ಅನಂತರ. ಶತಮಾನವು ಬದಲಾಗುವ ಹಂತದಲ್ಲಿ, ಕರ್ಜನ್ ನೀತಿಯು ಶೈಕ್ಷಣಿಕ ಮತ್ತು ರಾಜಕೀಯ ಕಾರಣಗಳಿಗಾಗಿ ಉನ್ನತ ಶಿಕ್ಷಣದ ಬೆಳವಣಿಗೆಯನ್ನು ನಿಯಂತ್ರಿಸಲು ಪ್ರಯತ್ನಿಸಿದರೂ ಇದು ಯಶಸ್ವಿಯಾಗಲಿಲ್ಲ.

1921 ರಿಂದ 1947ರವರೆಗೆ ಶಿಕ್ಷಣವನ್ನು ನಿಯಮಿತ ಭಾರತೀಯ ನಿಯಂತ್ರಣಕ್ಕೆ ವರ್ಗಾಯಿಸಿದ ಕಾರಣದಿಂದಾಗಿ ಮತ್ತು ಹೆಚ್ಚಿನ ರಾಜಕೀಯ ಜಾಗೃತಿಯ ಕಾರಣದಿಂದಾಗಿ, ಹಿಂದಿನ ವರ್ಷಗಳಿಗಿಂತಲೂ ವೇಗ ಹೆಚ್ಚಾಯಿತು. ಈ ಬೆಳವಣಿಗೆಯು ಮುಖ್ಯವಾಗಿ ಖಾಸಗಿಯಾಗಿ ನಿರ್ವಹಿಸಲಾಗುತ್ತಿದ್ದ ಶಾಲೆಗಳು ಮತ್ತು ಕಾಲೇಜುಗಳಲ್ಲಿ ಆಗಿತ್ತು. ಇದು ಸೂಚಿಸುವುದೇನೆಂದರೆ, ಇಪ್ಪತ್ತನೆಯ ಶತಮಾನದ ಪ್ರಾರಂಭದ ವರ್ಷಗಳಲ್ಲಿ ಶಿಕ್ಷಣ ವಿಸ್ತರಣಾ ಪ್ರಕ್ರಿಯೆಯು ಸ್ವಯಂ ನಿರ್ಮಿತವಾದದ್ದು ಮತ್ತು ಸರ್ಕಾರದ ನೆರವು ಇರಲಿ ಅಥವಾ ಇಲ್ಲದಿರಲಿ ಅದು ಮುಂದುವರಿಯುತ್ತದೆ. ಶಿಕ್ಷಣವೆಂಬ ಜಗನ್ನಾಥ ರಥವನ್ನು ನಿಯಂತ್ರಿಸುವಲ್ಲಿ ಅಧಿಕೃತ ನೀತಿಗಳು ವಿಫಲವಾದವು.

ಆದರೆ ಬೆಳವಣಿಗೆಯ ಪ್ರಮಾಣವು ದೇಶದಾದ್ಯಂತ ಏಕಪ್ರಕಾರವಾಗಿರಲಿಲ್ಲ. ಒಂದು ಪ್ರದೇಶಕ್ಕೂ ಇನ್ನೊಂದು ಪ್ರದೇಶಕ್ಕೂ ಹೋಲಿಸಿದರೆ ಬೆಳವಣಿಗೆಯ ಪ್ರಮಾಣದಲ್ಲಿ ವ್ಯತ್ಯಾಸವಿತ್ತು, ಅಲ್ಲದೆ ಒಂದು ಪ್ರದೇಶದಲ್ಲಿ ಒಂದು ಗುಂಪಿಗೂ ಇನ್ನೊಂದು ಗುಂಪಿಗೂ ವ್ಯತ್ಯಾಸವಿತ್ತು. ಇಂಗ್ಲಿಷ್ ಶಿಕ್ಷಣದ ಪ್ರಥಮ ಪ್ರಭಾವವು ಮೂರು ಪ್ರಾಂತ್ಯಗಳಲ್ಲಿ (Presidencies) ಅನುಭವಕ್ಕೆ ಬಂದಿತು. ಏಕೆಂದರೆ ಬ್ರಿಟನ್ ಒಂದು ಬೃಹತ್ ಸಾಗರದಂತಹ ಸಾಮ್ರಾಜ್ಯವಾಗಿತ್ತು. ಈ ಮೂರು ಸೇರ್ಪಡೆಯಾದ ಮೊದಲ ಪ್ರಾಂತ್ಯಗಳಾಗಿದ್ದವು. ಬಂಗಾಳದಲ್ಲಿ ಉನ್ನತ ಶಿಕ್ಷಣವು ವ್ಯಾಪಕವಾಗಿ ಪ್ರಸಾರವಾಯಿತು. ಅಲ್ಲಿ ಕಲಾ ಕಾಲೇಜುಗಳು ಮತ್ತು ವಿದ್ಯಾರ್ಥಿಗಳ ಸಂಖ್ಯೆ ಅತ್ಯಧಿಕವಾಗಿತ್ತು (ಕೋಷ್ಟ 2). ಆದರೆ ಇಂಗ್ಲಿಷ್ ಶಿಕ್ಷಣವು

ಪ್ರಾಂತ್ಯದ ಎಲ್ಲ ಭಾಗಗಳಲ್ಲಿ ಅಥವಾ ಎಲ್ಲ ಸಮುದಯಗಳು ಹಾಗೂ ಜಾತಿಗಳಲ್ಲಿ ಸಮಾನವಾಗಿ ಮುನ್ನಡೆ ಸಾಧಿಸಿರಲಿಲ್ಲ.

ಎಲ್ಲೆಲ್ಲೂ ಸಾಕ್ಷರತೆ ಮತ್ತು ಶಿಕ್ಷಣವು ಸ್ತ್ರೀಯರಿಗಿಂತ ಹೆಚ್ಚಾಗಿ ಪುರುಷರಲ್ಲಿ ವ್ಯಾಪಕವಾಗಿ ಹರಡಿತ್ತು.[61] ಗ್ರಾಮಗಳಿಗಿಂತ ನಗರಗಳಲ್ಲಿ ಹಾಗೂ ಮೇಲ್ವರ್ಗದವರಲ್ಲಿ ವ್ಯಾಪಕವಾಗಿ ಹರಡಿತ್ತು. ಹೊಸ ಶಿಕ್ಷಣಕ್ಕೆ ಪ್ರತಿಸ್ಪಂದಿಸಿದ ಮೊದಲ ಗುಂಪೆಂದರೆ ಸಾಂಪ್ರದಾಯಿಕವಾಗಿ ಅಕ್ಷರಸ್ಥರಾದ ಜಾತಿಗಳು ಅಂದರೆ: ಮದ್ರಾಸ್ ಮತ್ತು ಮಹಾರಾಷ್ಟ್ರಗಳಲ್ಲಿ ಬ್ರಾಹ್ಮಣರು; ಬಂಗಾಳದಲ್ಲಿ ಕಾಯಸ್ಥರು, ವೈದ್ಯರು ಮತ್ತು ಬ್ರಾಹ್ಮಣರು; ಸಂಯುಕ್ತ ಪ್ರಾಂತ್ಯಗಳಲ್ಲಿ ಕಾಯಸ್ಥರು ಮತ್ತು ಸೈಯೀದರು. ಒಂದು ನಿಯಮವ್ವೋ ಎಂಬಂತೆ ಶಿಕ್ಷಣದ ಏಣಿಯಲ್ಲಿ ಉನ್ನತ ಜಾತಿಯವರು ಮೇಲ್ತುದಿಯಲ್ಲಿ ಹಾಗೂ ಅನುಸೂಚಿತ ಜಾತಿ ಮತ್ತು ಪಂಗಡಗಳವರು ಕೆಳತುದಿಯಲ್ಲಿ ಇದ್ದರು.[62] ಆದಾಗ್ಯೂ, ಬಹುಪಾಲು ಉದ್ಯೋಗದ ಮೇಲೆ ಅವಲಂಬಿಸಿದ್ದರು. ಅನೇಕ ಪ್ರಸಂಗಗಳಲ್ಲಿ ವ್ಯಾಪಾರದಲ್ಲಿ ತೊಡಗಿಕೊಂಡವರಾಗಿದ್ದ ಕೆಳಜಾತಿಯವರು ಸಾಮಾಜಿಕ ಶ್ರೇಣಿಯಲ್ಲಿ ಉನ್ನತ ಹಂತದಲ್ಲಿರುವ ಇತರರಿಗಿಂತ ಹೆಚ್ಚು ಅಕ್ಷರಸ್ಥರಾಗಿದ್ದರು.[63]

**ಕೋಷ್ಟಕ 2**

ಪ್ರಾಂತ್ಯವಾರು ಇಂಗ್ಲಿಷ್ ಕಲಾ ಕಾಲೇಜುಗಳು ಮತ್ತು ವಿದ್ಯಾರ್ಥಿಗಳು (1916-17)
ಪ್ರಾಂತ್ಯವಾರು ಸೆಕೆಂಡರಿ ಇಂಗ್ಲೀಷ್ ಶಾಲೆಗಳು ಮತ್ತು ವಿದ್ಯಾರ್ಥಿಗಳು

| ಪ್ರಾಂತ್ಯಗಳು | ಕಾಲೇಜುಗಳು | ವಿದ್ಯಾರ್ಥಿಗಳು | ಶಾಲೆಗಳು | ವಿದ್ಯಾರ್ಥಿಗಳು |
|---|---|---|---|---|
| ಮದ್ರಾಸ್ | 34 | 7,724 | 377 | 1,39,796 |
| ಬಾಂಬೆ | 8 | 4,888 | 388 | 61,884 |
| ಬಂಗಾಳ | 33 | 8,478 | 2,317 | 3,82,420 |
| ಉತ್ತರ ಪ್ರದೇಶ | 18 | 4,815 | 228 | 55,772 |
| ಪಂಜಾಬ್ | 10 | 4,091 | 271 | 82,583 |
| ಬಿಹಾರ್ ಮತ್ತು ಒರಿಸ್ಸಾ | 7 | 2,575 | 330 | 58,607 |
| ಸಿ.ಪಿ. ಮತ್ತು ಬೇರಾರ್ | 4 | 1,094 | 196 | 21,086 |
| ಅಸ್ಸಾಮ್ | 2 | 688 | 149 | 24,664 |
| ಎನ್. ಡಬ್ಲ್ಯೂ ಎಫ್.ಪಿ | 2 | 177 | 25 | 7,773 |
| ಇತರ ಪ್ರಾಂತ್ಯಗಳು | 5 | 1,244 | 41 | 9,503 |

ಪ್ರೋಗ್ರೆಸ್ ಆಫ್ ಎಜುಕೇಷನ್ ಇನ್ ಇಂಡಿಯಾ 1912-1917, ಸಂಪುಟ-2, ಪುಟ.125 ಮತ್ತು ಪುಟ.131.

ವ್ಯಾಪಕವಾಗಿ ಹರಡಿರುವ ಭಾವನೆಗೆ ವ್ಯತಿರಿಕ್ತವಾಗಿ, ಭಾರತದ ಎಲ್ಲ ಪ್ರದೇಶಗಳಲ್ಲಿ ಮುಸ್ಲಿಮರು ಶಿಕ್ಷಣದ ಓಟದ ಪಂದ್ಯದಲ್ಲಿ ಹಿಂದೆ ಉಳಿದಿರಲಿಲ್ಲ.[64] ಉದಾಹರಣೆಗೆ ಸಂಯುಕ್ತ ಪ್ರಾಂತ್ಯದಲ್ಲಿ ಅವರು ನಗರೀಕರಣಗೊಂಡಿದ್ದರು ಮತ್ತು ಕೃಷಿಯೇತರ ಕಸುಬುಗಳಲ್ಲಿ

ತೊಡಗಿಕೊಂಡಿದ್ದರು.[65] ಅವರು ಒಟ್ಟು ಜನಸಂಖ್ಯೆಯ (1921ರ ಜನಗಣತಿ) ಶೇ.14 ರಷ್ಟು ಇದ್ದರೂ, ಒಟ್ಟು ವಿದ್ಯಾರ್ಥಿಗಳಿಗೆ ಹೋಲಿಸಿದರೆ ಮುಸ್ಲಿಮ್ ವಿದ್ಯಾರ್ಥಿಗಳ ಸಂಖ್ಯೆ ಶೇ.18.1 ರಷ್ಟಿತ್ತು.[66] ಕಾಲೇಜ್ ಹಂತದಲ್ಲೂ ಕೂಡ ಒಟ್ಟು ವಿದ್ಯಾರ್ಥಿಗಳಲ್ಲಿ ಶೇ.24.1 ರಷ್ಟು ಮುಸ್ಲಿಮರಿದ್ದರು.[67] ಎಲ್ಲ ಧಾರ್ಮಿಕ ಸಮುದಾಯಗಳಲ್ಲಿ ಪಾರ್ಸಿಗಳಲ್ಲಿ ಶಿಕ್ಷಣವು ವ್ಯಾಪಕವಾಗಿ ಹರಡಿತ್ತು. ಅನಂತರದ ಸ್ಥಾನ ಯೆಹೂದಿಗಳು ಮತ್ತು ಜೈನರದ್ದು.[68]

ಭಾರತದ ಶಿಕ್ಷಣವು ಪ್ರಧಾನವಾಗಿ ಸಾಹಿತ್ಯಕ ಒಲವನ್ನು ಹೊಂದಿತ್ತು ಎಂಬುದು ಸರ್ವವಿದಿತ. ಕೋಷ್ಟಕ 3 ಕಲಾ ಕಾಲೇಜು ಮತ್ತು ವೃತ್ತಿ ಕಾಲೇಜುಗಳ ಸಂಖ್ಯೆ ಮತ್ತು ಅಲ್ಲಿರುವ ವಿದ್ಯಾರ್ಥಿಗಳ ಸಂಖ್ಯೆಯನ್ನು ಹೋಲಿಸುತ್ತದೆ.

ಕೋಷ್ಟಕ 3

ಕಲೆ ಮತ್ತು ವೃತ್ತಿ ಕಾಲೇಜುಗಳ ಹೋಲಿಕೆ (1916-17)

| | **ಶಿಕ್ಷಣ ಸಂಸ್ಥೆಗಳು** | **ವಿದ್ಯಾರ್ಥಿಗಳು** |
|---|---|---|
| ಕಲಾ ಕಾಲೇಜುಗಳು | 124 | 1,54,952 |
| ಇಂಜಿನಿಯರಿಂಗ್ ಕಾಲೇಜುಗಳು | 9 | 1,815 |
| ವೈದ್ಯಕೀಯ ಕಾಲೇಜುಗಳು | 5 | 2,279 |
| ಕಾನೂನು ಕಾಲೇಜುಗಳು | 28 | 5,476 |
| ಕೃಷಿ ಕಾಲೇಜುಗಳು | 5 | 445 |

ಪ್ರೋಗ್ರೆಸ್ ಆಫ್ ಎಜುಕೇಷನ್ ಇನ್ ಇಂಡಿಯಾ 1912-1917, ಸಂಪುಟ-2, ಪುಟ.98, 157, 158, 159.

ಎಲ್ಲ ವೃತ್ತಿ ಕಾಲೇಜುಗಳ ಪೈಕಿ ಕಾನೂನು ಕಾಲೇಜುಗಳು ಅತ್ಯಂತ ಜನಪ್ರಿಯವಾಗಿದ್ದವು. 1855ರಲ್ಲಿ ಹಿಂದೂ ಕಾಲೇಜುಗಳಲ್ಲಿ ಕಾನೂನು ತರಗತಿಗಳನ್ನು ಶಾಶ್ವತ ಆಧಾರದ ಮೇಲೆ ವ್ಯವಸ್ಥೆಗೊಳಿಸಲಾಗಿತ್ತು. ಇದಾದ ಸ್ವಲ್ಪ ಕಾಲದ ಅನಂತರ ಎಲ್ಫಿನ್‌ಸ್ಟೋನ್ ಕಾಲೇಜಿನಲ್ಲಿ ಕಾನೂನಿನ ಪೆರ್ರಿ ಪ್ರಾಧ್ಯಾಪಕರ ಹುದ್ದೆಯನ್ನು ಮಂಜೂರು ಮಾಡಲಾಯಿತು.[69]

1857ರಲ್ಲಿ ವಿಶ್ವವಿದ್ಯಾಲಯಗಳ ಪ್ರಾರಂಭಕ್ಕೆ ಮೊದಲೇ ಕಲ್ಕತ್ತ, ಮದ್ರಾಸ್ ಮತ್ತು ಬಾಂಬೆಯಲ್ಲಿ ವೈದ್ಯಕೀಯ ಕಾಲೇಜುಗಳಿದ್ದವು. ಕಲ್ಕತ್ತದ ವೈದ್ಯಕೀಯ ಕಾಲೇಜನ್ನು 1835ರಲ್ಲಿ ಪ್ರಾರಂಭಿಸಲಾಯಿತು.[70] ಅದೇ ವರ್ಷದಲ್ಲಿ ಮದ್ರಾಸಿನಲ್ಲಿ ಒಂದು ವೈದ್ಯಕೀಯ ಶಾಲೆಯನ್ನು ಸ್ಥಾಪಿಸಲಾಯಿತು. 1851ರಲ್ಲಿ ಅದನ್ನು ಕಾಲೇಜಿನ ಸ್ಥಾನಕ್ಕೆ ಏರಿಸಲಾಯಿತು.[71] 1837ರಲ್ಲಿ ಬಾಂಬೆಯ ಗರ್ವನರ್ ಆಗಿದ್ದ ಸರ್ ರಾಬರ್ಟ್ ಗ್ರಾಂಟ್ ದೇಶೀಯ ವೈದ್ಯಕೀಯ ಶಿಕ್ಷಣವನ್ನು ಕುರಿತು ಒಂದು ವರದಿಯನ್ನು ಸಲ್ಲಿಸಬೇಕೆಂದು ಕೇಳಿದರು. ಈ ವರದಿಯನ್ನು ಆಧರಿಸಿ ಬಾಂಬೆಯಲ್ಲಿ ಒಂದು ವೈದ್ಯಕೀಯ ಕಾಲೇಜನ್ನು ಸ್ಥಾಪಿಸಲು ಒಂದು ಯೋಜನೆಯನ್ನು ಸಿದ್ಧಪಡಿಸಿದರು. ಅದಕ್ಕೆ ಅವನ ಹೆಸರನ್ನೇ ಇಡಲಾಯಿತು. ದ ಗ್ರ್ಯಾಂಟ್ ಮೆಡಿಕಲ್ ಕಾಲೇಜನ್ನು 1845ರಲ್ಲಿ ಪ್ರಾರಂಭಿಸಲಾಯಿತು.[72]

ಈ ವೈದ್ಯಕೀಯ ಕಾಲೇಜುಗಳಲ್ಲಿ ಪ್ರವೇಶ ಪಡೆಯುವುದು ಕಠಿಣವಾಗಿತ್ತು ಮತ್ತು ಶುಲ್ಕವೂ ಅಧಿಕವಾಗಿತ್ತು. ಖಾಸಗಿಯಾಗಿ ವೈದ್ಯಕೀಯ ವೃತ್ತಿಯನ್ನು ನಡೆಸುವ ಸಂಭಾವ್ಯತೆ ಅನಿಶ್ಚಿತವಾಗಿತ್ತು. ಆಸ್ಪತ್ರೆಗಳು ಕೆಲವೇ ಇದ್ದವು. ಸರ್ಕಾರಿ ಉದ್ಯೋಗವು ಪರಿಮಿತವಾಗಿತ್ತು. 1947ರ ವೇಳೆಗೆ 24 ವೈದ್ಯಕೀಯ ಕಾಲೇಜುಗಳು ಇದ್ದವು. ದಾಖಲಾತಿ 8,797 ಆಗಿತ್ತು.[73] 40 ಕೋಟಿ ಜನಸಂಖ್ಯೆಗೆ ಇದು ತೀರ ಕಡಮೆ ಸಂಖ್ಯೆಯಾಗಿತ್ತು.

ಸಾರ್ವಜನಿಕ ಕಟ್ಟಡಗಳು, ರಸ್ತೆಗಳೂ, ಕಾಲುವೆಗಳು ಮತ್ತು ಬಂದರುಗಳನ್ನು ನಿರ್ಮಿಸುವುದಕ್ಕೆ ಮತ್ತು ನಿರ್ವಹಣೆ ಮಾಡುವುದಕ್ಕೆ ಮೇಲ್ವಿಚಾರಕರನ್ನು ತರಬೇತಿಗೊಳಿಸುವ ಅವಶ್ಯಕತೆಯಿಂದಾಗಿ ಇಂಜಿನಿಯರಿಂಗ್ ಶಿಕ್ಷಣದ ಅಗತ್ಯ ಉಂಟಾಯಿತು. ಭೂಸೇನೆ, ನೌಕಾಸೇನೆ ಮತ್ತು ಸರ್ವೇಕ್ಷಣ ಇಲಾಖೆಗೆ ಅಗತ್ಯವಾದ ಉಪಕರಣಗಳು ಮತ್ತು ಸಲಕರಣೆಗಳನ್ನು ಬಳಸಲು ತರಬೇತಿ ಹೊಂದಿದ ಕುಶಲಕರ್ಮಿಗಳು ಮತ್ತು ಕರಕುಶಲಿಗಳು ಬೇಕಾಗಿದ್ದರು. ಸೂಪರಿಟೆಂಡಿಂಗ್ ಇಂಜಿನಿಯರ್‌ಗಳನ್ನು ಬಹುಪಾಲು ಬ್ರಿಟನ್ನಿನ ಕೂಪರ್ಸ್ ಹಿಲ್ ಕಾಲೇಜಿನಿಂದ ನೇಮಕ ಮಾಡಿಕೊಳ್ಳಲಾಗುತ್ತಿತ್ತು; ಆದರೆ ಕೆಳಗಿನ ಶ್ರೇಣಿಯವರನ್ನು ಹೀಗೆ ನೇಮಕ ಮಾಡಿಕೊಳ್ಳುವುದು ಸಾಧ್ಯವಿರಲಿಲ್ಲ. ಅವರನ್ನು ಸ್ಥಳೀಯವಾಗಿಯೇ ನೇಮಿಸಿಕೊಳ್ಳಲಾಗುತ್ತಿತ್ತು. ಅವರನ್ನು ಸಮರ್ಥರನ್ನಾಗಿ ಮಾಡಬೇಕಾದ ಅಗತ್ಯದಿಂದಾಗಿ ಸೈನಿಕ ಸಾಮಗ್ರಿ ಮತ್ತು ಶಸ್ತ್ರಗಳ ಕಾರ್ಖಾನೆಗಳಿಗೆ ಸೂಕ್ತವಾದ ವೃತ್ತಿ ಶಿಕ್ಷಣ ಶಾಲೆಗಳನ್ನು ಸ್ಥಾಪಿಸಲಾಯಿತು. ಅಂತಹ ಶಾಲೆಗಳು 1825ರಷ್ಟು ಹಿಂದೆಯೇ ಕಲ್ಕತ್ತ ಮತ್ತು ಬಾಂಬೆಗಳಲ್ಲಿ ಇದ್ದವು ಎಂದು ವರದಿಯಾಗಿದೆ.[74] ಆದರೆ ನಮ್ಮಲ್ಲಿರುವ ಅಧಿಕೃತವಾದ ಪ್ರಥಮ ದಾಖಲೆಯೆಂದರೆ 1842ರಲ್ಲಿ ಮದ್ರಾಸಿನ ಗಿಂಡಿಯಲ್ಲಿ ಸ್ಥಾಪಿತವಾದ ವೃತ್ತಿ ಶಿಕ್ಷಣ ಶಾಲೆ, ಅದನ್ನು ಅಲ್ಲಿನ ಗನ್ ಕ್ಯಾರಿಯೇಜ್ ಕಾರ್ಖಾನೆಯೊಂದಿಗೆ ನಿಯೋಜಿಲಾಗಿತ್ತು.

ಭಾರತದಲ್ಲಿ ಪ್ರಪ್ರಥಮ ಇಂಜಿನಿಯರಿಂಗ್ ಕಾಲೇಜನ್ನು 1847ರಲ್ಲಿ ಉತ್ತರ ಪ್ರದೇಶದ ರೂರ್ಕಿಯಲ್ಲಿ, ಸಿವಿಲ್ ಇಂಜಿನಿಯರ್‌ಗಳನ್ನು ತರಬೇತಿಗೊಳಿಸಲು ಸ್ಥಾಪಿಸಲಾಗಿತ್ತು.[75] ಅದರ ಸ್ಥಾಪನೆಯು ಗಂಗಾ ಮೇಲ್ದಂಡೆ ಕಾಲುವೆಯ ನಿರ್ಮಾಣಕ್ಕೆ ಸಂಬಂಧಿಸಿತ್ತು. ಸುಮಾರು 1856-57ರ ಅವಧಿಯಲ್ಲಿ ಮೂರು ಪ್ರಾಂತ್ಯಗಳಾದ ಕಲ್ಕತ್ತ (ಶಿವಪುರ), ಪೂನಾ ಮತ್ತು ಮದ್ರಾಸ್‌ಗಳಲ್ಲಿ (ಗಿಂಡಿ) ಮೂರು ಇಂಜಿನಿಯರಿಂಗ್ ಕಾಲೇಜುಗಳನ್ನು ಸ್ಥಾಪಿಸಲಾಯಿತು.[76] ಈ ಕಾಲೇಜುಗಳಲ್ಲಿ 1880ರವರೆಗೂ ಸಿವಿಲ್ ಇಂಜಿನಿಯರಿಂಗ್‌ನಲ್ಲಿ ಲೈಸೆನ್ಷಿಯೇಟ್ ಕೋರ್ಸ್ ಅನ್ನು ನೀಡಲಾಗುತ್ತಿತ್ತು. ಅನಂತರ ಅವು ಪದವಿ ತರಗತಿಗಳನ್ನು ಏರ್ಪಡಿಸಿದವು. 1915ರಲ್ಲಿ ಸ್ಥಾಪಿತವಾಗಿದ್ದ ಬೆಂಗಳೂರಿನ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್‌ನಲ್ಲಿ ಎಲೆಕ್ಟ್ರಿಕಲ್ ಇಂಜಿನಿಯರಿಂಗ್ ಅನ್ನು ಪ್ರಥಮಬಾರಿ ಬೋಧಿಸಲಾಯಿತು.

1917ರಲ್ಲಿ ಬನಾರಸ್ ವಿಶ್ವವಿದ್ಯಾಲಯದಲ್ಲಿ ಮೆಕ್ಯಾನಿಕಲ್ ಮತ್ತು ಎಲೆಕ್ಟ್ರಿಕಲ್ ಇಂಜಿನಿಯರಿಂಗ್ ಪದವಿ ತರಗತಿಗಳನ್ನು ಮೊದಲ ಬಾರಿಗೆ ಪ್ರಾರಂಭಿಸಲಾಯಿತು. ಶಿವಪುರ, ಪೂನಾ ಮತ್ತು ಗಿಂಡಿ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಮೆಕ್ಯಾನಿಕಲ್ ಮತ್ತು ಎಲೆಕ್ಟ್ರಿಕಲ್ ಇಂಜಿನಿಯರಿಂಗ್ ಪದವಿ ತರಗತಿಗಳನ್ನು 1930 ರ ದಶಕದವರೆಗೂ ಪ್ರಾರಂಭಿಸಿರಲಿಲ್ಲ.

1947ರವರೆಗೂ ಬಿಹಾರಿನ ಧನಬಾದ್‌ನಲ್ಲಿ ಇದ್ದ ಗಣಿಗಾರಿಕೆ ಶಾಲೆಯೊಂದೇ ಪೂರ್ಣ ಪ್ರಮಾಣದ ಗಣಿಗಾರಿಕೆ ಶಾಲೆಯಾಗಿತ್ತು. ಅದು ವರ್ಷಕ್ಕೆ ಸುಮಾರು ಹತ್ತು ವಿದ್ಯಾರ್ಥಿಗಳನ್ನಷ್ಟೇ ಸೇರಿಸಿಕೊಳ್ಳುತ್ತಿತ್ತು.[77] ಬನಾರಸ್ ಹಿಂದೂ ವಿಶ್ವವಿದ್ಯಾಲಯ ಮಾತ್ರ ಗಣಿಗಾರಿಕೆಯಲ್ಲಿ ಪದವಿ ಶಿಕ್ಷಣ ಕ್ರಮವನ್ನು ಒದಗಿಸಿತ್ತು.

ಕೃಷಿ ಶಿಕ್ಷಣಕ್ಕೆ ಹೆಚ್ಚಿನ ಗಮನ ಕೊಟ್ಟಿರಲಿಲ್ಲ. 1947ರಲ್ಲಿ ಕೇವಲ 29 ಕೃಷಿ ಕಾಲೇಜುಗಳಿದ್ದವು. ಅವುಗಳಲ್ಲಿ 5000 ಕ್ಕಿಂತ ಕಡಮೆ ವಿದ್ಯಾರ್ಥಿಗಳು ಇದ್ದರು. ಇವುಗಳಲ್ಲೂ ಕೂಡ, ಭಾರತದ ಕೃಷಿಯ ಪ್ರಾಯೋಗಿಕ ಅಗತ್ಯಗಳು ಪಠ್ಯಕ್ರಮದಲ್ಲಿ ಕ್ವಚಿತ್ತಾಗಿದ್ದವು.

ಹೈನುಗಾರಿಕೆ ಅಥವಾ ಕೋಳಿಸಾಕಣೆ, ತೋಟಗಾರಿಕೆ ಅಥವಾ ಪಶುವೈದ್ಯ ವಿಜ್ಞಾನವನ್ನು ಬೋಧಿಸಲು ಯಾವ ಶಿಕ್ಷಣ ಸಂಸ್ಥೆಗಳೂ ಇರಲಿಲ್ಲವೆಂದೇ ಹೇಳಬಹುದು.

ಪಠ್ಯಕ್ರಮದಿಂದ ತಂತ್ರಜ್ಞಾನ ವಿಷಯಗಳನ್ನು ಹೊರಗಿಟ್ಟಿರುವುದು, ಮತ್ತು ಉನ್ನತ ತಾಂತ್ರಿಕ ಶಿಕ್ಷಣವನ್ನು ನೀಡುವ ಕೆಲವೇ ಶಿಕ್ಷಣ ಸಂಸ್ಥೆಗಳಿರುವುದು ಸರ್ಕಾರದ ಉದ್ಯೋಗ ನೀತಿಯೊಂದಿಗೆ ನಿಕಟವಾಗಿ ತಳಕು ಹಾಕಿಕೊಂಡಿತ್ತು.[78] ಇಂಡಿಯನ್ ಇಂಜಿನಿಯರಿಂಗ್ ಸರ್ವೀಸ್, ಇಂಡಿಯನ್ ರೈಲ್ವೆ ಸರ್ವೀಸ್, ನೀರಾವರಿ ಇಲಾಖೆ, ಸೈನಿಕ ಸಾಮಗ್ರಿ ಮತ್ತು ಶಸ್ತ್ರಗಳ ಕಾರ್ಖಾನೆಗಳು, ಅಂಚೆ ಮತ್ತು ತಂತಿ ಇಲಾಖೆ, ಮತ್ತು ದಿಟವಾಗಿ ಎಲ್ಲ ಉನ್ನತ ಸೇವೆಗಳಲ್ಲಿ ಉನ್ನತ ನೇಮಕಾತಿಗಳು ಯುರೋಪಿನವರಿಗೆ ಮೀಸಲಾಗಿದ್ದವು.[79] ಖಾಸಗಿ ವಲಯದಲ್ಲಿ, ಬಾಂಬೆಯನ್ನು ಹೊರತುಪಡಿಸಿ, ಆಧುನಿಕ ತಯಾರಿಕಾ ವಿಧಾನಗಳು ಯೂರೋಪಿಯನ್ನರಿಗೆ ಸೀಮಿತವಾಗಿದ್ದವು (ಪ್ರಥಮ ವಿಶ್ವ ಯುದ್ಧ ವರ್ಷಗಳ ಪೂರ್ವದ ಅವಧಿಯಲ್ಲಿ). ಈ ಕೈಗಾರಿಕೆಗಳಿಗೆ ತಾಂತ್ರಿಕ ಜ್ಞಾನದ ಜನರು ಬೇಕಾಗಿದ್ದರೆ ಅವರು ಯಾವಾಗಲೂ ಯುರೋಪಿಯನ್ನರನ್ನೇ ಇಷ್ಟಪಡುತ್ತಿದ್ದರು.[80] ಹೀಗೆ ತಾಂತ್ರಿಕವಾಗಿ ಅರ್ಹತೆಗಳಿಸಿರುವ ಮತ್ತು ತರಬೇತಿ ಹೊಂದಿರುವ ಭಾರತೀಯರಿಗೆ ಅವಕಾಶಗಳು ಪರಿಮಿತವಾಗಿದ್ದವು. ಮಾನ್ಯತೆ ಪಡೆದ ನಾಲ್ಕು ಇಂಜಿನಿಯರಿಂಗ್ ಕಾಲೇಜುಗಳಷ್ಟೇ ಇದ್ದವು. 1916-17ರಲ್ಲಿ ವಾರ್ಷಿಕವಾಗಿ 74 ಇಂನಿಯರಿಂಗ್ ಪದವೀಧರರು ಹೊರಬಂದಿದ್ದರು. ಲಭ್ಯ ಹುದ್ದೆಗಳಿಗಿಂತ ಇಂಜಿನಿಯರ್‌ಗಳ ಸಂಖ್ಯೆಯೇ ಇನ್ನೂ ಹೆಚ್ಚಾಗಿತ್ತು.[81]

ಕೈಗಾರೀಕರಣವನ್ನು ಕುರಿತು ಸರ್ಕಾರಕ್ಕೆ ಉದ್ದೇಶಪೂರ್ವಕ ನೀತಿಯೇನೂ ಇರಲಿಲ್ಲ. ಮದ್ರಾಸ್ ಪ್ರಾಂತ್ಯದಲ್ಲಿ ಕೈಗಾರಿಕಾ ನಿರ್ದೇಶಕರನ್ನು ನೇಮಕಮಾಡಿಕೊಂಡ ರೀತಿಯಲ್ಲಿ ಪ್ರಾಂತೀಯ ಸರ್ಕಾರಗಳು ಏನಾದರೂ ಪ್ರಯತ್ನ ಮಾಡಿದರೆ ಯುರೋಪಿನ ವ್ಯಾಪಾರಿಗಳ ಸಮುದಾಯವು ಎಷ್ಟು ತೀಕ್ಷ್ಣವಾಗಿ ಪ್ರತಿಕ್ರಿಯಿಸುತ್ತಿತ್ತೆಂದರೆ ಆ ಯೋಜನೆಯನ್ನು ಹಿಂದಕ್ಕೆ ಪಡೆಯಬೇಕಾಗುತ್ತಿತ್ತು.[82] ಕೈಗಾರೀಕರಣ ಮತ್ತು ಸರ್ಕಾರದ ಆರ್ಥಿಕ ಹಾಗೂ ನೇಮಕಾತಿ ನೀತಿಯಲ್ಲಿ ನಿಧಾನಗತಿ ಇತ್ತು. ಹೀಗಿರುವಾಗ, ಸಹಜವಾಗಿಯೇ ತಾಂತ್ರಿಕ ಶಿಕ್ಷಣದ ಬೆಳವಣಿಗೆಯ ಪ್ರೋತ್ಸಾಹಕ್ಕೆ ಮಹತ್ತ್ವದ ಅಂಶವೇನೂ ಇರಲಿಲ್ಲ.

ಭಾರತದ ಶಿಕ್ಷಣ ಪದ್ಧತಿ ತಲೆಭಾರದಂತಿತ್ತು ಮತ್ತು ಸಮತೂಕವಿಲ್ಲದಂತಿತ್ತು. ಶತಮಾನದ ಆರಂಭ ಸಮಯದಲ್ಲಿ ಭಾರತದಲ್ಲಿ ಕಾಲೇಜುಗಳು ಮತ್ತು ಪ್ರೌಢಶಾಲೆಗಳ ಜಾಲ ವ್ಯಾಪಿಸಿಕೊಂಡಿತ್ತು, ಆದರೆ ಪ್ರಾಥಮಿಕ ಶಿಕ್ಷಣವೇ ಹಿಂದೆ ಬಿದ್ದಿತ್ತು. ದೇಶವು ಇಂಗ್ಲೀಷ್ ಶಿಕ್ಷಣದಲ್ಲಿ ರಭಸದಿಂದ ಮುನ್ನುಗ್ಗುತ್ತಿದ್ದರೆ, “ಅಸಂಖ್ಯಾತ ಗ್ರಾಹಕರಿದ್ದ ದೇಶ ಭಾಷೆಗಳು ಇನ್ನೂ ಪ್ರಾರಂಭದ ಕಂಬದ ಬಳಿಯೇ ನಿಂತಿದ್ದವು.” 1904ರಲ್ಲಿ ನಾಲ್ಕು ಗ್ರಾಮಗಳ ಪೈಕಿ ಮೂರು ಗ್ರಾಮಗಳಲ್ಲಿ ಶಾಲೆಯೊಂದು ಇರಲಿಲ್ಲ ಮತ್ತು ಶಾಲೆಗೆ ಹೋಗುವಷ್ಟು ವಯಸ್ಸಾದ ಮಕ್ಕಳಲ್ಲಿ ಐದನೆಯ ಒಂದರಷ್ಟು ಗಂಡುಮಕ್ಕಳು ಮಾತ್ರ ಶಾಲೆಗೆ ಹಾಜರಾಗುತ್ತಿದ್ದರು.[83] 1835ರಿಂದಲೂ ನಗರೀಕರಣಗೊಂಡ ಉನ್ನತ ಮತ್ತು ಮಧ್ಯಮ ವರ್ಗದವರ ಮೇಲೆ ಗಮನವನ್ನು ಕೇಂದ್ರೀಕರಿಸಿದ್ದರಿಂದ, ಸಮುದಾಯದ ಶಿಕ್ಷಣ ಆಲಕ್ಷ್ಯಕ್ಕೆ ತುತ್ತಾಯಿತು. ವುಡ್‌ನ ಓಲೆ (1854), ಭಾರತೀಯ ಶಿಕ್ಷಣ ಆಯೋಗ (1882) ಮತ್ತು 1904 ಮತ್ತು 1913ರ ಶಿಕ್ಷಣ ನೀತಿಯನ್ನು ಕುರಿತ ನಿರ್ಣಯಗಳು ಈ ವೈಫಲ್ಯದತ್ತ ಗಮನವನ್ನು ಸೆಳೆದವು. ಅನೇಕ ಪಕ್ಷಗಳು ಕರ್ತವ್ಯ ನಿಷ್ಠೆಯಿಂದ ಎಚ್ಚರಿಕೆಯ ಮಾತುಗಳನ್ನು ಹೇಳಿದರೂ, ಪ್ರಾಥಮಿಕ ಶಿಕ್ಷಣವನ್ನು ಔದಾಸೀನ್ಯದಲ್ಲಿಯೇ ಬಿಡಲಾಯಿತು. ಮಾಂಟಗೊ-ಚೆಲ್ಮ್ಸ್ ಫರ್ಡ್ ಸುಧಾರಣೆಗಳ ಅನಂತರ, ಶಿಕ್ಷಣವು ಭಾರತೀಯ ಮಂತ್ರಿಗಳ ಅಧೀನ ಬಂದ ವರ್ಗಾಂತರಿತ ವಿಷಯವಾದಾಗ ಪ್ರಾಥಮಿಕ ಶಿಕ್ಷಣವು ಕನಿಷ್ಠ ಪಕ್ಷ ಅದಕ್ಕೆ ಸಲ್ಲಬೇಕಾದ ಮನ್ನಣೆಯನ್ನು ಪಡೆಯುತ್ತದೆ ಎಂದು ಭಾವಿಸಲಾಯಿತು. ಬಹುತೇಕ ಪ್ರತಿಯೊಂದು ಪ್ರಾಂತ್ಯವೂ ಪ್ರಾಥಮಿಕ ಶಿಕ್ಷಣದ ಅಧಿ ನಿಯಮಗಳನ್ನು ಅನುಮೋದಿಸಿತು. ಆದರೆ ಇವು ಬಹುಪಾಲು ನಿಷ್ಕ್ರಿಯವಾಗಿ ಉಳಿದವು. ಏಕೆಂದರೆ ಸ್ಥಳೀಯ ಮಂಡಲಿಗಳಿಗೆ ಪ್ರಾಥಮಿಕ ಶಿಕ್ಷಣಕ್ಕೆ ಹಣವನ್ನು ಒದಗಿಸಲು

ವಿಶೇಷ ತೆರಿಗೆಯನ್ನು ವಿಧಿಸಲು ಇಷ್ಟವಿರಲಿಲ್ಲ. ಭಾರತದಲ್ಲಿ ಶಿಕ್ಷಣಕ್ಕಾಗಿ ವೆಚ್ಚ ಮಾಡುವ ಒಟ್ಟು ಹಣದಲ್ಲಿ 1937ರಲ್ಲಿ ಸುಮಾರು ಶೇ.30 ರಷ್ಟನ್ನು ಮಾತ್ರ ಪ್ರಾಥಮಿಕ ಶಿಕ್ಷಣಕ್ಕಾಗಿ ಖರ್ಚು ಮಾಡಲಾಗುತ್ತಿತ್ತು. ಆದರೆ ಪಶ್ಚಿಮ ಯುರೋಪ್, ಉತ್ತರ ಅಮೇರಿಕ ಅಥವಾ ಆಸ್ಟ್ರೇಲಿಯ ದೇಶಗಳಲ್ಲಿ ಸುಮಾರು ಶೇ.70 ರಷ್ಟನ್ನು ಪ್ರಾಥಮಿಕ ಶಿಕ್ಷಣಕ್ಕಾಗಿ ವಿನಿಯೋಗಿಸಲಾಗುತ್ತಿತ್ತು.

ಗ್ರಾಮೀಣ ಪ್ರದೇಶಗಳಲ್ಲಿ ಪ್ರಾಥಮಿಕ ಶಿಕ್ಷಣವು ವಿಫಲವಾದುದಕ್ಕೆ ಪ್ರಧಾನ ಕಾರಣವೆಂದರೆ ನಷ್ಟ ಮತ್ತು ಶಾಲೆ ತೊರೆಯುವವರ ಅಧಿಕ ಪ್ರಮಾಣ. ಸಾಮಾನ್ಯ ರೈತನಿಗೆ ಓದುವ ಮತ್ತು ಬರೆಯುವ ಸಂದರ್ಭ ಅನೇಕ ಬಾರಿ ಮಾತ್ರ ಬರುತ್ತಿರಲಿಲ್ಲ. ಆದ್ದರಿಂದ ಶಿಕ್ಷಣ ಎನ್ನುವುದು ದುಬಾರಿಯಾದ ಒಂದು ವೈಭೋಗವಾಗಿತ್ತು. ಶಿಕ್ಷಣವು ಉಚಿತವಾಗಿದ್ದರೂ ಮಕ್ಕಳಿಗೆ ಪುಸ್ತಕಗಳು, ಸ್ಲೇಟುಗಳು, ಸಮವಸ್ತ್ರಗಳು ಮತ್ತು ಇತರ ಉಪಕರಣಗಳನ್ನು ಒದಗಿಸಬೇಕಾಗಿದ್ದರಿಂದ ಹಣ ಖರ್ಚಾಗುತ್ತಿತ್ತು. ಹೆತ್ತವರು ಬಡವರಾಗಿದ್ದಷ್ಟೂ, ವಯಸ್ಸಾದಾಗ ಮಗುವನ್ನು ಹೊಲಗಳಲ್ಲಿ ಕೆಲಸಕ್ಕೆ ಹಚ್ಚುವುದಕ್ಕೆ ಬಳಸಿಕೊಳ್ಳಲು ಶಾಲೆಯಿಂದ ಬಿಡಿಸುವ ಸಂಭವ ಹೆಚ್ಚಾಗಿತ್ತು. ಹೀಗಾಗಿ ಗ್ರಾಮೀಣ ಪ್ರದೇಶದಲ್ಲಿ ಕಡ್ಡಾಯ ಶಿಕ್ಷಣವು ಯಶಸ್ವಿಯಾಗಲಿಲ್ಲ. ಎರಡನೆಯ ವಿಶ್ವಯುದ್ಧಕ್ಕೆ ಮುಂಚೆ ಪ್ರಾಥಮಿಕ ಹಂತದಲ್ಲಿ ಭಾರತದಲ್ಲಿ ಶಿಕ್ಷಣ ಯೋಗ್ಯ ಮಕ್ಕಳ ಸಂಖ್ಯೆಗೆ ಹೋಲಿಸಿದರೆ ಶಾಲೆಗೆ ದಾಖಲಾತಿಯಾದವರ ಸಂಖ್ಯೆ ಶೇ.31 ಇತ್ತು. ಇದು ಅತ್ಯಂತ ಪ್ರಗತಿ ಸಾಧಿಸಿದ ದೇಶಗಳಲ್ಲಿ ಶೇ.100 ಆಗಿತ್ತು.[84]

ಭಾರತದ ಆರ್ಥಿಕ ಅಭಿವೃದ್ಧಿಯಲ್ಲಿ ಅತ್ಯಂತ ಗಂಭೀರವಾದ ಅಡಚಣೆ ಎಂದರೆ ಸಾಕ್ಷರತೆಯ ಪ್ರಮಾಣವು ಕೆಳಮಟ್ಟದಲ್ಲಿರುವುದು. ಈ ಸನ್ನಿವೇಶವನ್ನು ಬ್ರಿಟಿಷರು ಸೃಷ್ಟಿಸಲಿಲ್ಲ. ಬಹುಮಟ್ಟಿಗೆ ಸಂಭವನೀಯತೆ ಎಂದರೆ, ಬ್ರಿಟಿಷರ ಆಡಳಿತ ಪ್ರಾರಂಭವಾಗುವುದಕ್ಕೆ ಮುಂಚೆಯೇ ಸಮುದಾಯವನ್ನು ಅಜ್ಞಾನದ ಅಂಧಕಾರದಲ್ಲಿ ಬಿಡಲಾಗಿತ್ತು. ಅವರು ಗಣ್ಯರ ರಾಜಕೀಯ ಅಥವಾ ಸಾಂಸ್ಕೃತಿಕ ಜೀವನದಲ್ಲಿ ಭಾಗವಹಿಸುತ್ತಿದ್ದುದು ಕಡಮೆಯೇ. ಜ್ಞಾನವು ಪವಿತ್ರವಾದದ್ದು ಎಂದು ಪರಿಗಣಿಸುವ ಪ್ರವೃತ್ತಿ, ಧಾರ್ಮಿಕ ಮತ್ತು ಇತರ ಪಠ್ಯಗಳನ್ನು ಮೌಖಿಕವಾಗಿ ಸಂವಹನ ಮಾಡುವುದು, ಗುರುಕುಲ ಪದ್ಧತಿ ಮುಂತಾದ ಎಲ್ಲ ಸಂಗತಿಗಳು ಸಾಕ್ಷರತೆಯ ಪ್ರಸಾರಕ್ಕೆ ತಡೆ ಒಡ್ಡಿದ್ದವು.

ಈ ಎಲ್ಲ ವರ್ಷಗಳ ಉದ್ದಕ್ಕೂ ಹೊಸ ಪ್ರದೇಶಗಳು ಮತ್ತು ಹೊಸ ಗುಂಪುಗಳೊಳಕ್ಕೆ ಒಳನಾಡಿಗಳಲ್ಲಿ ಶಿಕ್ಷಣವು ಭೇದಿಸಿಕೊಂಡು ನುಗ್ಗುತ್ತಿತ್ತು. ಮಹೋನ್ನತವಾದ ಬೆಳವಣಿಗೆಯಲ್ಲಿ ಒಂದು ಎಂದರೆ ಮಹಿಳೆಯರು ಮತ್ತು ಅನುಸೂಚಿತ ಜಾತಿ ಮತ್ತು ಪಂಗಡಗಳಂತಹ ದುರ್ಬಲವರ್ಗಗಳಲ್ಲಿ ಶಿಕ್ಷಣವು ಪ್ರಸಾರವಾದದ್ದು. ಮಹಿಳಾ ಶಿಕ್ಷಣದ ಕ್ಷೇತ್ರದಲ್ಲಿ ಪ್ರಥಮ ಪ್ರಯತ್ನಗಳನ್ನು ಮಾಡಿದವರೆಂದರೆ ಧರ್ಮಪ್ರಚಾರಕರು ಮತ್ತು ಪ್ರಬುದ್ಧ ಭಾರತೀಯರು. ಜಾನ್ ಡ್ರಿಂಕ್ ವಾಟರ್ ಬೆತ್ಯೂನ್ ಮೇ 1849ರಲ್ಲಿ ಕಲ್ಕತ್ತದಲ್ಲಿ ಸ್ಥಾಪಿಸಿದ ಬಾಲಕಿಯರ (ಬೆತ್ಯೂನ್) ಪಾಠಶಾಲೆಯು ಮಹಿಳಾ ಶಿಕ್ಷಣದ ಇತಿಹಾಸದಲ್ಲಿ ಒಂದು ಸಂಧಿಕಾಲ ಎಂದು ಪರಿಗಣಿಸಬಹುದು. 1850ರ ದಶಕದ ವೇಳೆಗೆ ಲಾರ್ಡ್ ಡಾಲ್‌ಹೌಸಿಯ ಸರ್ಕಾರವು ಈ ವಿಚಾರದಲ್ಲಿ ಹೆಚ್ಚು ಕ್ರಿಯಾಶೀಲವಾದ ಆಸಕ್ತಿಯನ್ನು ವಹಿಸಿತು. ಬಾಲಕಿಯರ ಪಾಠಶಾಲೆಗಳನ್ನು ಸ್ಥಾಪಿಸಬೇಕು ಮತ್ತು ಬಾಲಕಿಯರಲ್ಲಿ ಶಿಕ್ಷಣದ ಪ್ರಸಾರಕ್ಕೆ ಸಾಧ್ಯವಾದ ಎಲ್ಲ ವಿಧಾನಗಳಿಂದಲೂ ನೆರವನ್ನು ನೀಡಬೇಕು ಎಂದು ಅವರು ನಿರ್ದೇಶನವನ್ನು ನೀಡಿದರು.[85] ಮಹಿಳೆಯರಲ್ಲಿ ಶಿಕ್ಷಣವನ್ನು ಪ್ರಸಾರ ಮಾಡಲು ದಿ ಇಂಡಿಯನ್ ಎಜುಕೇಷನ್ ಕಮಿಷನ್ (ಭಾರತೀಯ ಶಿಕ್ಷಣ ಆಯೋಗ) 1882ರಲ್ಲಿ ಅನೇಕ ಪ್ರಮುಖ ಶಿಫಾರಸ್ಸುಗಳನ್ನು ಮಾಡಿತು.[86] ಈ ನೀತಿಯನ್ನು ಮುಂದಿನ ಸರ್ಕಾರಿ ನಿರ್ಣಯಗಳು ಪುನರುಚ್ಚರಿಸಿದವು. ಮಹಿಳಾ ಶಿಕ್ಷಣವು ಪ್ರಾಥಮಿಕ ಹಂತದಲ್ಲಿ ವರ್ಧಿಸಲಾರಂಭಿಸಿತು. ಆದರೆ ಮಾಧ್ಯಮಿಕ ಹಂತದಲ್ಲಿ ಇದು ಬಹಳಷ್ಟು ನಿಧಾನವಾಯಿತು. ಮಹಿಳೆಯರ ಉನ್ನತ ಶಿಕ್ಷಣವು ಇನ್ನೂ ತಡವಾಗಿ ಆರಂಭವಾಯಿತು. 1891ರಲ್ಲಿ ಕಲಾ

ಕಾಲೇಜುಗಳಲ್ಲಿ 50ಕ್ಕಿಂತ ಹೆಚ್ಚು ಬಾಲಕಿಯರು ಇರಲಿಲ್ಲ.[87] ನಿರೀಕ್ಷೆಯಂತೆ, ಪುರುಷರ ವಿಷಯದಲ್ಲಿ ಇರುವಂತೆಯೇ ಮಹಿಳಾ ಶಿಕ್ಷಣವು ಮೊದಲು ನಗರಗಳಲ್ಲಿ ಮತ್ತು ಮಧ್ಯಮ ಮತ್ತು ಮೇಲ್ವರ್ಗಗಳಲ್ಲಿ ಪ್ರಸಾರವಾಯಿತು. ಅದು ಗ್ರಾಮೀಣ ಪ್ರದೇಶಗಳಲ್ಲಿ ಮತ್ತು ಕೆಳವರ್ಗಗಳಲ್ಲಿ ಪ್ರಸಾರವಾಗುವುದು ನಿಧಾನವಾಯಿತು. 1921ರ ವೇಳೆಗೆ ಮಹಿಳಾ ಸಾಕ್ಷರತೆಯ ಶೇಕಡವಾರು ಕೇವಲ 1.8 ರಷ್ಟಕ್ಕೆ ಹೆಚ್ಚಾಗಿತ್ತು.[88] 1921ರ ಅನಂತರ, ಮುಖ್ಯವಾಗಿ ಮಹಿಳೆಯರಲ್ಲಿ ರಾಜಕೀಯ ಜಾಗೃತಿಯುಂಟಾದ ಕಾರಣದಿಂದಾಗಿ ಮತ್ತು ಸ್ವಾತಂತ್ರ್ಯದ ಆಂದೋಲನದಲ್ಲಿ ಅವರು ಭಾಗವಹಿಸಿದ್ದರಿಂದಾಗಿ ಶಿಕ್ಷಣ ಸಂಸ್ಥೆಗಳಲ್ಲಿ ಬಾಲಕಿಯರ ಸಂಖ್ಯೆಯು ಗಮನಾರ್ಹವಾಗಿ ಹೆಚ್ಚಳವಾಯಿತು.

ಈಸ್ಟ್ ಇಂಡಿಯಾ ಕಂಪನಿ ಮತ್ತು ಧರ್ಮಪ್ರಚಾರಕರು ಸ್ಥಾಪಿಸಿದ ಶಾಲೆಗಳು ಎಲ್ಲ ಜಾತಿಯ ಬಾಲಕರಿಗೆಂದು ಉದ್ದಿಷ್ಟವಾಗಿದ್ದವು. ದಿಟದಲ್ಲಿ, ಒಂದು ಶಾಲೆಯನ್ನು ಮುಚ್ಚಬೇಕಾದ ಪ್ರಸಂಗ ಬಂದರೂ ಪರವಾಗಿಲ್ಲ, ಸರ್ಕಾರಿ ಶಾಲೆಯಲ್ಲಿ ಯಾವ ಅಸ್ಪೃಶ್ಯ ಮಗುವಿಗೂ ಪ್ರವೇಶವನ್ನು ನಿರಾಕರಿಸಬಾರದು ಎಂಬ ಒಂದು ಸ್ಪಷ್ಟವಾದ ನೀತಿಯನ್ನು ರೂಪಿಸಲಾಗಿತ್ತು. ಕೆಳವರ್ಗದ ಜಾತಿಗಳ ಮಕ್ಕಳಿಗೆ ಸರ್ಕಾರಿ ಶಾಲೆಗಳಲ್ಲಿ ಪ್ರವೇಶ ದೊರಕಿದರೂ 1921ರವರೆಗೂ ಅವರ ಶಿಕ್ಷಣವು ಗಮನಾರ್ಹ ಪ್ರಗತಿಯನ್ನು ಸಾಧಿಸಲಿಲ್ಲ. ಮಹಾತ್ಮ ಗಾಂಧಿ ಅಸ್ಪೃಶ್ಯತೆಯನ್ನು ತೊಡೆದುಹಾಕಬೇಕೆಂದು ರಾಷ್ಟ್ರವ್ಯಾಪಿ ಆಂದೋಲನವನ್ನು ಪ್ರಾರಂಭಿಸಿದ ಮೇಲಷ್ಟೇ ಹಿಂದುಳಿದ ಜಾತಿಗಳ ಮತ್ತು ಪಂಗಡಗಳ ಶಿಕ್ಷಣದ ಉದ್ದೇಶವು ವ್ಯಾಪಕ ಪ್ರಮಾಣದಲ್ಲಿ ಬೆಂಬಲವನ್ನು ಪಡೆಯಿತು. ಕಾಂಗ್ರೆಸ್ ಸರ್ಕಾರ 1947ರಲ್ಲಿ ಅಧಿಕಾರಕ್ಕೆ ಬಂದಮೇಲೆ ಈ ನಿಟ್ಟಿನಲ್ಲಿ ಪ್ರಮುಖ ಕ್ರಮಗಳನ್ನು ಕೈಗೊಳ್ಳಲಾಯಿತು. ಆದರೆ 1947ರಲ್ಲಿ ಕೂಡ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳಲ್ಲಿ ಸಾಕ್ಷರತೆಯ ಶೇಕಡಾವಾರು ಮತ್ತು ದಾಖಲಾತಿಯ ಶೇಕಡಾವಾರು ತೀರ ಕೆಳಮಟ್ಟದಲ್ಲಿಯೇ ಇತ್ತು. ಆದಾಗ್ಯೂ, ಈ ಕಡಮೆ ಸವಲತ್ತಿನ ಗುಂಪುಗಳ ಊರ್ಧ್ವಮುಖ ಚಲನೆಗೆ ಇಷ್ಟು ಚಿಕ್ಕ ಪ್ರಮಾಣದಲ್ಲಿ ನಡೆದ ಶಿಕ್ಷಣದ ವಿಸ್ತರಣೆಯ ಒಂದು ಪ್ರಮುಖ ಸಂಪನ್ಮೂಲವಾಯಿತು.

ಹಿಂದುಳಿದ ವರ್ಗಗಳಲ್ಲಿ ಶಿಕ್ಷಣವನ್ನು ಪ್ರವರ್ತಿಸಿದ್ದು ಬ್ರಿಟಿಷರ ಇನ್ನೊಂದು ಕೊಡುಗೆ. ಈ ಪ್ರಯತ್ನಗಳು ಬಹುಮಟ್ಟಿಗೆ ರಾಜಕೀಯ ಪ್ರೇರಿತವಾಗಿದ್ದವು. "ಮುಂದುವರಿದ" ಜಾತಿಗಳು ಅಥವಾ ಸಮುದಾಯಗಳು ಬ್ರಿಟಿಷರ ಆಡಳಿತವನ್ನು ಪ್ರಶ್ನಿಸತೊಡಗಿದಾಗ ಅವರು ಸಮಾಜವನ್ನು "ಮುಂದುವರಿದವರು" ಮತ್ತು "ಮಧ್ಯಮವರ್ಗದವರು" ಮತ್ತು "ಹಿಂದುಳಿದವರು" ಎಂದು ಒಡೆಯಲು ಪ್ರಯತ್ನಿಸಿದರು. ಈ ಮಧ್ಯಮ ವರ್ಗದವರಲ್ಲಿ ಮುಸ್ಲಿಮರು ಸೇರಿದ್ದರು. ಬ್ರಿಟಿಷರು ಎರಡನೆಯ ಮತ್ತು ಮೂರನೆಯ ಗುಂಪುಗಳಲ್ಲಿ ಶಿಕ್ಷಣವನ್ನು ಪ್ರಸಾರ ಮಾಡಲು ವಿಶೇಷ ಗಮನವನ್ನು ಕೊಡಲಾರಂಭಿಸಿದರು. ಹಂಟರ್ ಬರೆದ ಇಂಡಿಯನ್ ಮುಸಲ್ಮಾನ್ಸ್ ಪ್ರಕಟವಾದ ಅನಂತರ 1870ರ ದಶಕದಲ್ಲಿ ಮುಸ್ಲಿಮರಿಗೆ ಇಂಗ್ಲಿಷ್ ಶಿಕ್ಷಣ ನೀಡುವುದನ್ನು ಪ್ರೋತ್ಸಾಹಿಸಲು ಸರ್ಕಾರವು ತನ್ನ ಗಮನವನ್ನು ಕೇಂದ್ರೀಕರಿಸಿತು. ಅನಂತರ ಬಂದ ಶೈಕ್ಷಣಿಕ ಸಮಿತಿಗಳು ಮತ್ತು ಆಯೋಗಗಳು ಈ ನೀತಿಯನ್ನು ಪುನರುಚ್ಚರಿಸಿದವು. ಇದು ಪ್ರತ್ಯೇಕತಾ ಪ್ರವೃತ್ತಿಗಳ ಬೆಳವಣಿಗೆಯನ್ನು ಉತ್ತೇಜಿಸುವುದರ ಜೊತೆಗೆ ಕಡಮೆ ಮುಂದುವರಿದ ಗುಂಪುಗಳಲ್ಲಿ ಶಿಕ್ಷಣವನ್ನು ಪ್ರಸಾರ ಮಾಡಲೂ ನೆರವಾಯಿತು.

ಸಾಕ್ಷರತೆಯ ಕೆಳಮಟ್ಟದ ಪ್ರಮಾಣ, ಸಾಮೂಹಿಕ ಶಿಕ್ಷಣ ಹಾಗೂ ತಾಂತ್ರಿಕ ಮತ್ತು ವೃತ್ತಿ ಶಿಕ್ಷಣದ ಬಗೆಗೆ ಅಲಕ್ಷ್ಯ ಮತ್ತು ಬೋಧನಾ ವಿಧಾನಗಳು ಇವು ಎಲ್ಲ ಅಭಿವೃದ್ಧಿಯ ಹಾದಿಯಲ್ಲಿ ಅಡಚಣೆಗಳಾಗಿದ್ದವು. ಇಂಗ್ಲಿಷ್ ಶಿಕ್ಷಣವು ನಗರದ ಬುದ್ಧಿಜೀವಿಗಳ ವರ್ಗವನ್ನು ಸೃಷ್ಟಿಸಿತು. ಒಂದು ಅರ್ಥದಲ್ಲಿ ಇದು ಒಂದು ಪ್ರಮುಖ ಇತ್ಯಾತ್ಮಕ ಸಾಧನೆಯಾಗಿತ್ತು. ಏಕೆಂದರೆ ಈ ಗುಂಪೇ ಆಡಳಿತಗಾರರು, ವೃತ್ತಿನಿರತರು ಮತ್ತು ರಾಜಕೀಯ ಮುಖಂಡರು

ಮತ್ತು ಸಮಾಜ ಸುಧಾರಕರನ್ನು ಒದಗಿಸಿತ್ತು. ಅವರೇ ಭಾರತದ ಆಧುನೀಕರಣದ ಪ್ರಕ್ರಿಯೆಗೆ ಉಪಕ್ರಮ ಮಾಡಿದವರು. ಸುಶಿಕ್ಷಿತ ಜನರು ಸುಧಾರಣೆಯ ಆದರ್ಶಗಳ ವ್ಯಾಖ್ಯೆ ಮಾಡಿದರು. ಇವು ಅವರದೇ ಆದ ಅಗತ್ಯಗಳು ಮತ್ತು ಆಕಾಂಕ್ಷೆಗಳನ್ನು ಪ್ರತಿಫಲಿಸಿದವು. ಈ ಕಾರಣದಿಂದಾಗಿಯೇ ಈ ಆಂದೋಲನಗಳ ಪ್ರಭಾವವು ಪರಿಮಿತವಾಗಿತ್ತು. ಬದಲಾವಣೆ ಮತ್ತು ರೂಪಾಂತರದ ಒಂದು ಸಾಧನವಾಗಿ ಶಿಕ್ಷಣದ ಪಾತ್ರವು, ಅದು ಕಾರ್ಯನಿರ್ವಹಿಸುತ್ತಿದ್ದ ವಸಾಹತು ಪರಿಸರದಲ್ಲಿ ವಿರೂಪಗೊಂಡಿತು.

## ಪರಾಮರ್ಶನ ಗ್ರಂಥಗಳು


1. ಹತ್ತೊಂಬತ್ತನೆಯ ಶತಮಾನದ ಆರಂಭಕಾಲದ ದೇಶೀಯ ಶಾಲೆಗಳನ್ನು ಕುರಿತ ವರ್ಣನೆಗೆ ನೋಡಿ: ಡಬ್ಲ್ಯೂ. ಆಡಮ್, ರಿಪೋರ್ಟ್ಸ್ ಆನ್ ದ ಸ್ಟೇಟ್ ಆಫ್ ಇಂಡಿಜಿನಸ್ ಎಜುಕೇಷನ್ ಇನ್ ಬೆಂಗಾಲ್, 1835. ಆರ್.ವಿ. ಪರುಲೇಕರ್, ಸರ್ವೆ ಆಫ್ ಇಂಡಿಜಿನಸ್ ಎಜುಕೇಷನ್ ಇನ್ ದ ಪ್ರಾವಿನ್ಸ್ ಆಫ್ ಬಾಂಬೆ, 1820-1830, ಬಾಂಬೆ, 1957.

   ಎ.ಜೆ. ಅರ್ಬತ್ ನಾಟ್ (ಸಂ.), ಸೆಲೆಕ್ಷನ್ಸ್ ಫ್ರಂ ದ ರೆಕಾರ್ಡ್ಸ್ ಆಫ್ ದ ಮದ್ರಾಸ್ ಗವರ್ನಮೆಂಟ್, ಮದ್ರಾಸ್, 1855. ರೀಡ್, ಎಚ್.ಎಸ್., ರಿಪೋರ್ಟ್ಸ್ ಆನ್ ಇಂಡಿಜಿನಸ್ ಎಜುಕೇಷನ್ ಅಂಡ್ ವರ್ನಾಕ್ಯುಲರ್ ಸ್ಕೂಲ್ಸ್, 1850-51, ಮುಂದಿನವು. ಲೀಟ್ನರ್, ಜಿ. ಡಬ್ಲ್ಯೂ, ಹಿಸ್ಟರಿ ಆಫ್ ಇಂಡಿಜಿನಸ್ ಎಜುಕೇಷನ್ ಇನ್ ದ ಪಂಜಾಬ್.

2. ಚಾರ್ಲ್ಸ್ ಗ್ರಾಂಟ್ ತನ್ನ ಭಾರತೀಯ ಜೀವನ ಪಥವನ್ನು 1768ರಲ್ಲಿ ಬಂಗಾಳದಲ್ಲಿ ಪ್ರಾರಂಭಿಸಿದನು. 1823ರಲ್ಲಿ ಅವರು ದಿವಂಗತನಾಗುವವರೆಗೂ ಭಾರತೀಯ ವಿದ್ಯಮಾನಗಳಲ್ಲಿ ಒಬ್ಬ ಪ್ರಧಾನ ವ್ಯಕ್ತಿಯಾಗಿ ಉಳಿದಿದ್ದನು. ಎ.ಟಿ. ಎಂಬ್ರೀ, ಚಾರ್ಲ್ಸ್ ಗ್ರ್ಯಾಂಟ್ ಅಂಡ್ ಬ್ರಿಟಿಷ್ ರೂಲ್ ಇನ್ ಇಂಡಿಯಾ, ಲಂಡನ್, 1962.
3. ಚಾರ್ಲ್ಸ್ ಗ್ರ್ಯಾಂಟ್, "ಗ್ರೇಟ್ ಬ್ರಿಟನ್ನಿನ ಏಷಿಯಾಟಿಕ್ ಪ್ರಜೆಗಳ ನಡುವಣ ಸಮಾಜದ ಸ್ಥಿತಿಯನ್ನು ಕುರಿತು ಅವಲೋಕನಗಳು...", 1792 ರಲ್ಲಿ ಬರೆದದ್ದು ಮತ್ತು 1813ರಲ್ಲಿ ಪ್ರಕಟವಾದದ್ದು. ಈಸ್ಟ್ ಇಂಡಿಯಾ ಕಂಪನಿಯ ವಿದ್ಯಮಾನಗಳನ್ನು ಕುರಿತು ಸೆಲೆಕ್ಟ್ ಕಮಿಟಿ ಆಫ್ ದ ಹೌಸ್ ಆಫ್ ಕಾಮನ್ಸ್ ಬರೆದ ವರದಿಯಲ್ಲಿ ಅದು ಕಂಡುಬರುತ್ತದೆ, 1832, ಅನುಬಂಧ-1, ಪುಟಗಳು 82-87.
4. ಕ್ಲಾಪಮ್ ಪಂಗಡಕ್ಕೆ ಸೇರಿದ ಇತರ ಸ್ಥಾಪಕ ಸದಸ್ಯರೆಂದರೆ ವಿಲಿಯಮ್ ವಿಲ್‌ಬರ್ ಫೋರ್ಸ್, ಜಕಾರಿ ಮೆಕಾಲೆ, ಹೆರಿ ಥಾರ್ನ್ಟನ್, ಜಾನ್‌ಷೋರ್ ಮತ್ತು ಜಾನ್ ವೆನ್.
5. ಇ. ಸ್ಟೋಕ್ಸ್ ದಿ ಇಂಗ್ಲೀಷ್ ಯುಟಿಲಿಟೇರಿಯನ್ಸ್ ಅಂಡ್ ಇಂಡಿಯಾ, ಆಕ್ಸ್ ಫರ್ಡ್, 1959, ಪುಟಗಳು 55-58.
6. ಬಂಗಾಳಕ್ಕೆ ಲಿಖಿತ ಸಮಾಚಾರ, 18-02-1824. ಎಚ್. ಷಾರ್ಪ್, (ಸಂ.), ಸೆಲೆಕ್ಷನ್ಸ್ ಫ್ರಮ್ ಎಜುಕೇಷನಲ್ ರೆಕಾರ್ಡ್ಸ್, ಭಾಗ-1, 1781-1839, ಪು.91.
7. ಈಸ್ಟ್ ಇಂಡಿಯಾ ಕಂಪನಿ ಆ್ಯಕ್ಟ್ ಆಫ್ 1815, ಸೆಲೆಕ್ಷನ್ಸ್ ಫ್ರಮ್ ಎಜುಕೇಷನಲ್ ರೆಕಾರ್ಡ್ಸ್, ಭಾಗ-1, ಪು.22.
8. 06-09-1811ರ ಮಿಂಟೋನ ಟಿಪ್ಪಣಿ, ಅದೇ, ಪು.19.
9. ಟಿ. ರಿಚರ್, ಹಿಸ್ಟರಿ ಆಫ್ ಮಿಷನ್ಸ್ ಇನ್ ಇಂಡಿಯಾ, ಲಂಡನ್, 1908. ಎಫ್. ಡಬ್ಲ್ಯೂ. ಥಾಮಸ್, ದ ಹಿಸ್ಟರಿ ಅಂಡ್ ಪ್ರಾಸ್ಪೆಕ್ಟ್ಸ್ ಆಫ್ ಬ್ರಿಟಿಷ್ ಎಜುಕೇಷನ್ ಇನ್ ಇಂಡಿಯಾ, ಕೇಂಬ್ರಿಡ್ಜ್, 1891. ಇ. ಪಾಟ್, ಬ್ರಿಟಿಷ್ ಬ್ಯಾಪ್ಟಿಸ್ಟ್ ಮಿಷನರೀಸ್ ಇನ್ ಇಂಡಿಯಾ, 1793-1837, ಕೇಂಬ್ರಿಡ್ಜ್, 1967. ಎಮ್.ಎ. ಲಾರ್ಡ್, ಮಿಷನರೀಸ್ ಅಂಡ್ ಎಜುಕೇಷನ್ ಇನ್ ಬೆಂಗಾಲ್, ಆಕ್ಸ್‌ಫರ್ಡ್, 1972.
10. ಸೆಲೆಕ್ಷನ್ ಫ್ರಮ್ ಎಜುಕೇಷನಲ್ ರೆಕಾರ್ಡ್ಸ್, ಪೂರ್ವೋಕ್ತ, ಪು.45.

11. ಅದೇ, ಪು.114.
12. ಅದೇ, ಪು.98-101.
13. ಅದೇ, ಪುಟ.113.
14. ಸಂಪದ್ ಸುಧಾರಕ್, 07-09-1833, ಬಂಗಾಳಿ ವಾರಪತ್ರಿಕೆ, 26-01-1828, ಸಂಪದ್ ಕೌಮುದಿ, 07-08-1830 ಇತ್ಯಾದಿ.
15. 18-08-1824 ರಂದು ಜಿ.ಸಿ.ಪಿ.ಐ ಅವರು ಗವರ್ನರ್ ಜನರಲ್ ಆಫ್ ಇಂಡಿಯಾ ಅವರಿಗೆ ಬರೆದ ಪತ್ರ, ಸೆಲೆಕ್ಷನ್ ಫ್ರಮ್ ಎಜುಕೇಷನಲ್ ರೆಕಾರ್ಡ್ಸ್, ಭಾಗ-1, ಪುಟಗಳು.107-117.
16. ಮೆಕಾಲೆ ಟಿಪ್ಪಣಿ ದಿನಾಂಕ:02-02-1835, ಅದೇ, ಪುಟಗಳು.107-117.
17. ಟಿ.ಜಿ.ಪಿ. ಸ್ಪಿಯರ್, "ಬೆಂಟಿಂಕ್ ಅಂಡ್ ಎಜುಕೇಷನ್", ದ ಕೇಂಬ್ರಿಡ್ಜ್ ಹಿಸ್ಟಾರಿಕಲ್ ಜರ್ನಲ್, ಸಂ. 6, ಸಂ.1.
18. ಸೆಲೆಕ್ಷನ್ಸ್ ಫ್ರಮ್ ಎಜುಕೇಷನಲ್ ರೆಕಾರ್ಡ್ಸ್, ಪೂರ್ವೋಕ್ತ, ಪುಟಗಳು-130-31.
19. ಎನ್.ಎಲ್. ಆ್ಯಡಮ್ ಮತ್ತು ಡಿ.ಎಮ. ಆ್ಯಡಮ್ಸ್, "ಆ್ಯನ್ ಎಕ್ಸಾಮಿನೇಷನ್ ಆಫ್ ಸಮ್ ಫೋರ್ಸಸ್ ಅಫೆಕ್ಟಿಂಗ್ ಇಂಗ್ಲಿಷ್ ಎಜುಕೇಷನಲ್ ಪಾಲಿಟಿಕ್ಸ್ ಇನ್ ಇಂಡಿಯಾ, 1780-1850", ಹಿಸ್ಟರಿ ಆಫ್ ಎಜುಕೇಷನ್ ಕ್ವಾರ್ಟರ್ಲಿ, ಸಂ.2, 1971.
20. ಸಿ.ಇ. ಟ್ರೆವೇಲಿಯನ್, ಆನ್ ದಿ ಎಜುಕೇಷನ್ ಆಫ್ ದ ಪೀಪಲ್ ಆಫ್ ಇಂಡಿಯಾ, ಲಂಡನ್, 1838, ಪುಟಗಳು 189-90.
21. 1829ರಲ್ಲಿ ಭಾರತದಲ್ಲಿ ಕಂಪನಿಯ ಕಂದಾಯ ಮತ್ತು ನ್ಯಾಯಸ್ಥಾನದ ಸೇವೆಗಳಲ್ಲಿ 1,197 ಜನ ಭಾರತೀಯರು ಇದ್ದರು, 1849ರ ಹೊತ್ತಿಗೆ ಅವರ ಸಂಖ್ಯೆ 2,813 ಆಗಿತ್ತು. ಬಿ.ಬಿ. ಮಿಶ್ರಾ ದಿ ಅಡ್ಮಿನಿಸ್ಟ್ರೇಟೀವ್ ಹಿಸ್ಟರಿ ಆಫ್ ಇಂಡಿಯಾ, 1834-1947, ಆಕ್ಸ್ ಫರ್ಡ್ ಯೂನಿವರ್ಸಿಟಿ ಪ್ರೆಸ್, 1971, ಪು.203
22. ಪಾರ್ಲಿಮೆಂಟರಿ ಪೇಪರ್ಸ್ (ಹೌಸ್ ಆಫ್ ಲಾರ್ಡ್ಸ್), ಸಂ. 445(iii), 1833, ಪು.142.
23. ಸೆಲೆಕ್ಷನ್ಸ್ ಫ್ರಮ್ ಎಜುಕೇಷನಲ್ ರೆಕಾರ್ಡ್ಸ್, ಸಂ. ಜೆ.ಎ. ರಿಚೆ, ಭಾಗ-2, ಪುಟಗಳು. 364-393.
24. ಇಂಡಿಯನ್ ಟೆರಿಟರೀಸ್, ಸೆಲೆಕ್ಟ್ ಕಮಿಟಿ, ಹೌಸ್ ಆಫ್ ಲಾರ್ಡ್ಸ್, 2ನೇ ವರದಿ, 1852-53, xxxii, ಪ್ಯಾರ 6627, ಮುಂದಿನ ಪುಟಗಳು, 6247, 6466, 6471.
25. ಡಾಲ್‌ಹೌಸಿಗೆ ವುಡ್, 24-11-1853, ಹಸ್ತಪ್ರತಿ ಇಯುಆರ್.ಎಫ್.78/ಎಲ್.ಬಿ. iv.
26. ಡಾಲ್‌ಹೌಸಿಗೆ ವುಡ್, 08-06-1854, ಹಸ್ತಪ್ರತಿ ಇಯು.ಆರ್.ಎಫ್.78/ಎಲ್.ಬಿ. v
27. ಪೂರ್ವೋಕ್ತ.
28. ಪೂರ್ವೋಕ್ತ.
29. ಸೆಲೆಕ್ಷನ್ ಫ್ರಮ್ ಎಜುಕೇಷನ್ ರೆಕಾರ್ಡ್ಸ್, ಭಾಗ-1, ಪೂರ್ವೋಕ್ತ, ಪು.6, ಪುಟಗಳು 45-46, ಪುಟಗಳು 73-76.
30. ಅದೇ ಪುಟಗಳು 51-52.
31. ಅದೇ - ಪುಟಗಳು 51-52.
32. ಎಸ್.ಜೆ. ಕರ್ಟಿಸ್, ಹಿಸ್ಟರಿ ಆಫ್ ಎಜುಕೇಷನ್ ಇನ್ ಗ್ರೇಟ್ ಬ್ರಿಟನ್, ಲಂಡನ್, 1965.
33. ಪ್ರೋಗ್ರೆಸ್ ಆಫ್ ಎಜುಕೇಷನ್ ಇನ್ ಇಂಡಿಯಾ, 1932-37, ಸಂಪುಟ-1, ಪುಟಗಳು 136, 164, ಸಂಪುಟ.2, ಪುಟ.117.
34. ಪ್ರೋಗ್ರೆಸ್ ಆಫ್ ಎಜುಕೇಷನ್ ಇನ್ ಇಂಡಿಯಾ, 1922-27, ಸಂಪುಟ-1, ಪು.33.
35. ಜಿ.ಸಿ.ಪಿ.ಐ. ಕೆಲವು ಕಿರಿಯ ಮತ್ತು ಹಿರಿಯ ವಿದ್ಯಾರ್ಥಿ ವೇತನಗಳನ್ನು ಸ್ಥಾಪಿಸಿತ್ತು. ವಿಧಿಸಲಾಗುವ ಅವಶ್ಯಕತೆಗಳು ಪಠ್ಯಕ್ರಮವನ್ನು ಕುರಿತು ತಕ್ಕಮಟ್ಟಿನ ಕಲ್ಪನೆಯನ್ನು ನೀಡುತ್ತವೆ. ಕಿರಿಯ ವಿದ್ಯಾರ್ಥಿವೇತನದ ಅರ್ಹತೆಗಳು ಹೀಗಿವೆ. ಇಂಗ್ಲಿಷ್ ವಾಚನ, ಇಂಗ್ಲಿಷ್ ವ್ಯಾಕರಣ, ಗ್ರೀಸ್, ರೋಮ್, ಇಂಗ್ಲೆಂಡ್ ಮತ್ತು ಇಂಡಿಯಾದ ಇತಿಹಾಸ, ಭೂಗೋಳಿಕ, ಅಂಕಗಣಿತ, ಹಿಂದೂಸ್ತಾನಿ ಅಥವಾ ಬಂಗಾಳಿಯ ಜ್ಞಾನ. ಹಿರಿಯರ

ವಿದ್ಯಾರ್ಥಿ ವೇತನಕ್ಕೆ ಅಭ್ಯರ್ಥಿಗಳು ಅಧ್ಯಯನ ಮಾಡಬೇಕಾದ ವಿಷಯಗಳು; ಇಂಗ್ಲೀಷ್ ಸಾಹಿತ್ಯ – ಷೇಕ್ಸ್ ಪಿಯರ್, ಬೇಕನ್, ಮಿಲ್ಟನ್, ಡ್ರೈಡನ್, ಸ್ವಿಫ್ಟ್, ಅಡಿಸಸ್, ಜಾನ್‌ಸನ್, ಇಂಗ್ಲಿಷ್ ಕಾಂಪೊಸಿಷನ್, ಇತಿಹಾಸ, ಗಣಿತ ಮತ್ತು ನೈಸರ್ಗಿಕ ತತ್ತ್ವಜ್ಞಾನ. ಕರೆಸ್ಪಾಂಡೆನ್ಸ್ ಅಂಡ್ ಪ್ರೊ. ಸೀಡಿಂಗ್ಸ್ ಆಫ್ ಜನರಲ್ ಕಮಿಟಿ ಆಫ್ ಪಬ್ಲಿಕ್ ಇನ್ಸ್ ಸ್ಟ್ರಕ್ಷನ್ಸ್, 1823-1841, ಸಂಪುಟ-5, ಪು.971.

36. ಅಬ್‌ಸ್ಟ್ರ್ಯಾಕ್ಟ್ ಅಂಡ್ ಅನಾಲಿಸಿಸ್ ಆಫ್ ದ ರಿಪೋರ್ಟ್ ಆಫ್ ಎಜುಕೇಷನ್ ಕಮಿಷನ್, ಇಂಡಿಯಾ, 1882. ದ.ರೆ.ಜೆ. ಜಾನ್‌ಸ್ಟನ್, ಲಂಡನ್, 1884 ಅವರಿಂದ (ಇನ್ನು ಮುಂದೆ ಅದನ್ನು ಎಜುಕೇಷನ್ ಕಮಿನಷ್, 1882 ಎರಡು ಕರೆಯಲಾಗುವುದು), ಪು.163.
37. ಹಾರ್ಟೋಗ್ ಕಮಿಟಿ, 1929, ಸಪ್ರು ಕಮಿಟಿ, 1934, ವೃತ್ತಿ ಶಿಕ್ಷಣವನ್ನು ಕುರಿತು ಆ್ಯಬಟ್ ವುಡ್ ರಿಪೋರ್ಟ್, 1993-37 ಮತ್ತು ಸಾರ್ಜಂಟ್ ರಿಪೋರ್ಟ್, 1944 ಇವುಗಳಿಂದ.
38. ಬಾಂಬೆ ಪ್ರೆಸಿಡೆನ್ಸಿಯ ಮರಾಠಿ ಮಾಧ್ಯಮ ಪ್ರಾಥಮಿಕ ಶಾಲೆಗಳಲ್ಲಿ ಓದುವುದಲ್ಲದೆ, ಬರೆವಣಿಗೆ ಮತ್ತು ಅಂಕಗಣಿತ, ಭೂಗೋಳ ಮತ್ತು ಇತಿಹಾಸಗಳನ್ನು ಬೋಧಿಸಲಾಗುತ್ತಿತ್ತು. ಮಾರಿಸ್ ಅವರ ಹಿಸ್ಟರಿ ಆಫ್ ಇಂಡಿಯಾ ಗ್ರಂಥವನ್ನು ಮರಾಠಿ ಮತ್ತು ಗುಜರಾತಿ ಭಾಷೆಗಳಿಗೆ ಅನುವಾದಿಸಲಾಗಿತ್ತು. ಮ್ಯಾಕಮಿಲನ್ ಅವರ ಸೈನ್ಸ್ ಪ್ರೈಮರ್ಸ್ ಮತ್ತು ಪ್ರೊ. ಕುಕ್ ಅವರ 'ನ್ಯಾಚುರಲ್ ಸೈನ್ಸ್ ಸೀರೀಸ್' ಗಳನ್ನೂ ಅನುವಾದಿಸಲಾಗಿತ್ತು. ಇಂಗ್ಲೀಷ್ ಅನ್ನು ನಾಲ್ಕನೇ ತರಗತಿಯಿಂದಲೇ ಬೋಧಿಸಲಾಗುತ್ತಿತ್ತು. ಅಪೆಂಡಿಕ್ಸ್ ಟು ಎಜುಕೇಷನ್ ಕಮಿಷನ್ ರಿಪೋರ್ಟ್ 1882, ಬಾಂಬೆ ಸಂಪುಟ-1, ರಿಪೋರ್ಟ್ ಆನ್ ಬಾಂಬೆ ಪ್ರುವಿನ್ಷಲ್ ಕಮಿಟಿ, ಪು.93.
39. 1855ರಲ್ಲಿ ಬಾಂಬೆ ಪ್ರಾಂತ್ಯದಲ್ಲಿ 3,578 ವಿದ್ಯಾರ್ಥಿಗಳಿದ್ದ 30 ಇಂಗ್ಲೀಷ್ ಮಾಧ್ಯಮಿಕ ಮತ್ತು ಪ್ರೌಢಶಾಲೆಗಳು, ಮತ್ತು 20,011 ವಿದ್ಯಾರ್ಥಿಗಳಿದ್ದ 256ನ ದೇಶೀಯ ಭಾಷೆಯ ಪ್ರಾಥಮಿಕ ಶಾಲೆಗಳು ಇದ್ದವು. ಅದೇ, ಪು.19. 1881-82 ರಲ್ಲಿ ಪ್ರೌಢ ಮತ್ತು ಮಾಧ್ಯಮಿಕ ಶಾಲೆಗಳಲ್ಲಿ 20,000 ವಿದ್ಯಾರ್ಥಿಗಳು ಮತ್ತು ಪ್ರಾಥಮಿಕ ಶಾಲೆಗಳಲ್ಲಿ 3,32,681 ವಿದ್ಯಾರ್ಥಿಗಳು ಇದ್ದರು. ಅದೇ, ಪು.207.
40. ಟಿ. ರಾಲೀ (ಸಂ.), ಲಾರ್ಡ್ ಕರ್ಜನ್ ಇನ್ ಇಂಡಿಯಾ (ಭಾಷಣಗಳು), ಲಂಡನ್, 1906, ಪು.318.
41. ಗಾಡ್ಲೆಗೆ ಕರ್ಜನ್, 18-10-1899, ಕರ್ಜನ್ ಪೇಪರ್ಸ್ (158).
42. ಗಾಡ್ಲೆಗೆ ಕರ್ಜನ್, 31-01-1901, ಕರ್ಜನ್ ಪೇಪರ್ಸ್ (161).
43. ಟಿ.ರಾಲೀ (ಸಂ.), ಲಾರ್ಡ್ ಕರ್ಜನ್ ಇನ್ ಇಂಡಿಯಾ, ಪು.325.
44. ಹ್ಯಾಮಿಲ್ಟನ್‌ಗೆ ಕರ್ಜನ್, 22-08-1901, ಕರ್ಜನ್ ಪೇಪರ್ಸ್ (161).
45. ದಿ ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ (ಮದ್ರಾಸ್, 1917), ಭಾಗ-1, 'ಪ್ರೆಸಿಡೆಂಷಿಯಲ್ ಅಡ್ರೆಸಸ್', ಪುಟಗಳು 622-23, 627, ಭಾಗ-2, 'ರೆಸಲ್ಯೂಷನ್', ಪುಟಗಳು 96, 103-4, 107-08. ಪ್ರೋಸೀಡಿಂಗ್ಸ್ ಆಫ್ ದ ಕೌನ್ಸಿಲ್ ಆಫ್ ದ ಗವರ್ನರ್ ಜನರಲ್ ಆಫ್ ಇಂಡಿಯಾ, ಸಂಪುಟ XLIII, 1903, ಪುಟಗಳು 305-6, 310, 321. ಮುಂದಿನದನ್ನೂ ನೋಡಿ: ನೇಟೀವ್ ನ್ಯೂಸ್ ಪೇಪರ್ ರಿಪೋರ್ಟ್ಸ್ ಆಫ್ ಬೆಂಗಾಲ್ ಅಂಡ್ ಬಾಂಬೆ, 1902, 1903, 1904.
46. ಲಾರ್ಡ್ ರೋನಾಲ್ಡ್ ಷೇ, ದ ಲೈಫ್ ಆಫ್ ಲಾರ್ಡ್ ಕರ್ಜನ್, ಲಂಡನ್, 1928, ಸಂಪುಟ-2, ಪುಟಗಳು.193-194.
47. ಕಲ್ಕತ್ತ ಯೂನಿವರ್ಸಿಟಿ ಕಮಿಷನ್ ರಿಪೋರ್ಟ್, 1919, ಸಂಪುಟ 4, ಪು.302.
48. ರಿವ್ಯೂ ಆಫ್ ದ ಗ್ರೋತ್ ಆಫ್ ಎಜುಕೇಷನ್ ಇನ್ ಬ್ರಿಟಿಷ್ ಇಂಡಿಯಾ ಬೈ ದಿ ಆಗ್‌ಸ್ವಿಲ್ಯರಿ ಕಮಿಟಿ ಆಫ್ ದಿ ಇಂಡಿಯನ್ ಸ್ಟ್ಯಾಟ್ಯುಟರಿ ಕಮಿಷನ್, 1929, (ಹಾರ್ಟಾಂಗ್ ಕಮಿಟಿ).

49. ದ ರಿಪೋರ್ಟ್ ಆಫ್ ದ ಯೂನಿವರ್ಸಿಟಿ ಎಜುಕೇಷನ್ ಕಮೀಷನ್, ದೆಹಲಿ, 1950. (ರಾಧಾಕೃಷ್ಣನ್ ರಿಪೋರ್ಟ್).
50. ಲಜಪತ್ ರಾಯ್, ಹಿಸ್ಟರಿ ಆಫ್ ಆರ್ಯಸಮಾಜ್, ಬಾಂಬೆ, 1967, ಪುಟಗಳು.143-51.
51. ವಿಶ್ವಭಾರತಿ ಅಂಡ್ ಇಟ್ಸ್ ಇನ್‌ಸ್ಟಿಟ್ಯೂಷನ್ಸ್, ಶಾಂತಿನಿಕೇತನ, 1956, ಪು.40.
52. ಉನ್ನತ ಶಿಕ್ಷಣಕ್ಕೆ ಸರ್ಕಾರ ನೀಡುತ್ತಿರುವ ಅನುದಾನವನ್ನು ಯಾವುದೇ ರೀತಿಯಲ್ಲಿ ಹಿಂತೆಗೆದುಕೊಳ್ಳುವುದು ತೀರ ಸಮಯೋಚಿತವಲ್ಲ ಎಂದು ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ 1892ರಲ್ಲಿ ಒಂದು ನಿರ್ಣಯವನ್ನು ಅಂಗೀಕರಿಸಿತು. ಮುಂದಿನ ವರ್ಷಗಳಲ್ಲಿ ಈ ಕೋರಿಕೆಯನ್ನು ಪುನರಾವರ್ತನೆ ಮಾಡಲಾಯಿತು. ಪ್ರಾಥಮಿಕ ಶಿಕ್ಷಣವನ್ನು ಕುರಿತ ಪರಸ್ತಾವವನ್ನು 1904 ರಲ್ಲಷ್ಟೇ ಪ್ರಥಮಬಾರಿಗೆ ಮಾಡಲಾಯಿತು. ಇಂಡಿಯನ್ ನ್ಯಾಷನಲ್ ಕಾಂಗ್ರೆಸ್, ಭಾಗ-2, ರೆಸಲ್ಯೂಷನ್.
53. ಗೋಖಲೆ 1910ರಲ್ಲಿ ಒಂದು ನಿರ್ಣಯವನ್ನು ಮಂಡಿಸಿದರು, ಆದರೆ ಗೃಹಮಂತ್ರಿಯವರು ಇಡೀ ಪ್ರಶ್ನೆಯನ್ನು ಜಾಗರೂಕತೆಯಿಂದ ಪರಿಶೀಲಿಸಲಾಗುತ್ತಿದೆ ಎಂದು ಭರವಸೆ ಕೊಟ್ಟಾಗ ಅದನ್ನು ಹಿಂತೆಗೆದುಕೊಂಡರು. ಮರುವರ್ಷ ಅವರು ಇಂಗ್ಲೆಂಡಿನ ಕಡ್ಡಾಯ ಶಿಕ್ಷಣ ಅಧಿನಿಯಮ 1870 ಮತ್ತು 1876ರ ಮೇಲೆ ಪ್ರಧಾನವಾಗಿ ಆಧರಿಸಿದ ಖಾಸಗಿ ಮಸೂದೆಯೊಂದನ್ನು ಮಂಡಿಸಿದರು. ಅದು ಗೋಖಲೆಯವರ ಮಾತುಗಳಲ್ಲಿ "ಶುದ್ಧಾಂತವಾಗಿ ಅನುಮತಿ ಕೊಡುವ ಸ್ವರೂಪದ್ದು", ಪ್ರೊಸೀಡಿಂಗ್ಸ್ ಆಫ್ ದ ಕೌನ್ಸಿಲ್ ಆಫ್ ದ ಗವರ್ನರ್ ಜನರಲ್ ಆಫ್ ಇಂಡಿಯಾ, ಏಪ್ರಿಲ್, 1910-ಮಾರ್ಚ್, 1911, ಸಂಪುಟ XLIX, ಪುಟಗಳು 447-48.
54. ಈ ಮಸೂದೆಗೆ ಭಾರತ ಸರ್ಕಾರದ ಪ್ರಥಮ ಪ್ರತಿಕ್ರಿಯೆಗಳು ಸಾಕಷ್ಟು ಅನುಕೂಲಕರವಾಗಿದ್ದವು. ಉಚಿತ ಪ್ರಾಥಮಿಕ ಶಿಕ್ಷಣ ಕುರಿತ ಬಟ್ಲರ್ ಅವರ ಟಿಪ್ಪಣಿ, 13-05-1911 ಇದಕ್ಕೆ ಸಂಲಗ್ನವಾಗಿ ಕ್ರ್ಯೂಗ್ ಬರೆದ ಹಾರ್ಡಿಂಜ್ ಟಿಪ್ಪಣಿ, 01-06-1911, ಹಾರ್ಡಿಂಜ್ ಪೇಪರ್ಸ್ (117), ಕ್ರ್ಯೂಗ್ ಬರೆದ ಹಾರ್ಡಿಂಜ್ ಟಿಪ್ಪಣಿ, 13-07-1911, 01-06-1911, 03-08-1911, ಹಾರ್ಡಿಂಜ್ ಪೇಪರ್ಸ್ (117) ಸೇರಿಸಲಾಗಿತ್ತು. ಇಷ್ಟೆಲ್ಲ ಇದ್ದರೂ ಸರ್ಕಾರವು ಗೋಕಲೆಯವರ ಮಸೂದೆಯನ್ನು ವಿರೋಧಿಸಿತು. ಏಕೆಂದರೆ ಪ್ರಾಂತೀಯ ಸರ್ಕಾರಗಳು ಅದನ್ನು ವಿರೋಧಿಸಿದ್ದವು. (ನೋಡಿ: ಎಡಿಷನ್ ಎ ಜುಲೈ, 1911, ಪ್ರೊಸೀಡಿಂಗ್ಸ್ ಸಂಖ್ಯೆ 79 ಎನ್.ಎ.ಐ.), ಅದರಲ್ಲೂ ವಿಶೇಷವಾಗಿ ಬಾಂಬೆ ಗವರ್ನರ್ ಸರ್ ಜಾರ್ಜ್ ಕ್ಲಾರ್ಕ್. ಹಾರ್ಡಿಂಜ್‌ಗೆ ಕ್ಲಾರ್ಕ್, 02-08-1911, 22-03-1911. ಹಾರ್ಡಿಂಜ್ ಪೇಪರ್ಸ್ (81) ಮತ್ತು (82). ಹಣಕಾಸು ಸದಸ್ಯ ಸರ್ ಗೈ ಫ್ಲೀಟ್‌ವುಡ್ ವಿಲ್ಸನ್ ಕೂಡ ಈ ಮಸೂದೆಯನ್ನು ವಿರೋಧಿಸಿದ್ದರು.
55. ನೋಡಿ: ಇಂಡಿಯನ್ ನ್ಯಾಷನಲ್ ಕಾಂಗ್ರೆಸ್, ಪ್ರೆಸಿಡೆನ್ಷಿಯಲ್ ಅಡ್ರೆಸ್ ಅಂಡ್ ರೆಸಲ್ಯೂಷನ್ಸ್. 'ತಾಂತ್ರಿಕ ಶಿಕ್ಷಣಕ್ಕೆ ಅದು ಅನಿವಾರ್ಯವಾದ ಅಗತ್ಯ' ಎಂದು ಅಲ್ಲಿ ಪದೇ ಪದೇ ಪ್ರಸ್ತಾವಿಸಲಾಗಿದೆ. ಸುದ್ದಿ ಪತ್ರಿಕೆಗಳೂ ಕೂಡ ಈ ವಿಚಾರವಾಗಿ ನಿರಂತರವಾಗಿ ಸರ್ಕಾರವನ್ನು ಟೀಕಿಸುತ್ತಿವೆ. ನೋಡಿ:ನೇಟೀವ್ ನ್ಯೂಸ್‌ಪೇಪರ್ ರಿಪೋರ್ಟ್ಸ್ ಆಫ್ ಬೆಂಗಾಲ್ ಅಂಡ್ ಬಾಂಬೆ – ಈ ಅವಧಿಯಲ್ಲಿ ಬಹುತೇಕ ಪ್ರತಿಯೊಂದು ವರ್ಷದಲ್ಲಿಯೂ ನೋಡಬಹುದು.
56. ರಿಪೋರ್ಟ್ ಆಫ್ ದಿ ಇಂಡಿಯನ್ ಇಂಡಸ್ಟ್ರಿಯಲ್ ಕಮಿಷನ್, 1916-18, I.26.
57. ಬೆಂಗಾಲ್ ಟೆಕ್ನಿಕಲ್ ಇನ್‌ಸ್ಟಿಟ್ಯೂಟ್ ಮತ್ತು ಬೆಂಗಾಲ್ ನ್ಯಾಷನಲ್ ಕಾಲೇಜ್ ಕುರಿತ ಆರಂಭಕಾಲದ ಇತಿಹಾಸಕ್ಕೆ ನೋಡಿ: ಹರಿದಾಸ್ ಮತ್ತು ಉಮಾ ಮುಖರ್ಜಿ ದಿ ಆರಿಜನ್ಸ್ ಆಫ್ ದ ನ್ಯಾಷನಲ್ ಎಜುಕೇಷನ್ ಮೂವ್‌ಮೆಂಟ್, ಕಲ್ಕತ್ತ, 1957, ಪುಟಗಳು 171-74, 404.
58. ಬಂಗಾಳಕ್ಕೆ ಅದೇ ನೋಡಿ. ಪೊಲಿಟಿಕಲ್ ಡಿಪಾಸಿಟ್ (ಕಾನ್‌ಫಿಡೆನ್ಷಿಯಲ್), ಜೂನ್, 1908, ಪ್ರೊಸೀಡಿಂಗ್ಸ್ 20, ಆವೃತ್ತಿ ಡಿಪಾಸಿಟ್, ಜನವರಿ 1909, ಸಂಖ್ಯೆ 26-27, ಪೊಲಿಟಿಕಲ್ ಡಿಪಾಸಿಟ್, ಅಕ್ಟೋಬರ್ 1910, ಸಂಖ್ಯೆ-2.

59. 1921 ರಲ್ಲಿ ಅಹಮದಾಬಾದ್‌ನಲ್ಲಿ ಗುಜರಾತ್ ವಿದ್ಯಾಪೀಠವನ್ನು ಸ್ಥಾಪಿಸಲಾಯಿತು. ಕಾಕ ಕಾಲೇಲ್ಕರ್ ಅದರ ಮೊದಲ ಆಚಾರ್ಯರಾಗಿದ್ದರು. ಕೆ.ಸಿ. ವ್ಯಾಸ್, ಡೆವಲಪ್‌ಮೆಂಟ್ ಆಫ್ ನ್ಯಾಷನಲ್ ಎಜುಕೇಷನ್ ಇನ್ ಇಂಡಿಯಾ.
60. ಎಮ್.ಕೆ. ಗಾಂಧಿ, ಬೇಸಿಕ್ ಎಜುಕೇಷನ್, ನವಜೀವನ್ ಪಬ್ಲಿಷಿಂಗ್ ಹೌಸ್, ಅಹಮದಾಬಾದ್, 1951, ಟುವರ್ಡ್ಸ್ ಎ ನ್ಯೂ ಎಜುಕೇಷನ್, ನವಜೀವನ್, ಅಹಮದಾಬಾದ್, 1953
61. 1921ರಲ್ಲಿ ಪ್ರತಿ 10,000 ಜನರಲ್ಲಿ ಇಂಗ್ಲಿಷ್ ಸಾಕ್ಷರತೆಯ ಪ್ರಮಾಣ: 5 ವರ್ಷಕ್ಕೆ ಮೇಲ್ಪಟ್ಟು ಎಲ್ಲ ವಯೋಮಾನದಲ್ಲಿ ಪುರುಷರು-160 ಮತ್ತು ಮಹಿಳೆಯರು-18. ಸೆನ್ಸಸ್ ಆಫ್ ಇಂಡಿಯಾ, ಸಂಪುಟ-1, ಭಾಗ-1, ಪು.188. 1941 ರಲ್ಲಿ ಕೂಡ ಪುರುಷರ ಸಾಕ್ಷರತೆಯ ಪ್ರಮಾಣ 22.6% ಕ್ಕೆ ಹೋಲಿಸಿದರೆ ಮಹಿಳೆಯರ ಪ್ರಮಾಣ 6% ಇತ್ತು. ರಿಪೋರ್ಟ್ ಆಫ್ ದ ನ್ಯಾಷನಲ್ ಕಮಿಟಿ ಆನ್ ವಿಮೆನ್ಸ್ ಎಜುಕೇಷನ್, ಶಿಕ್ಷಣ ಮಂತ್ರಾಲಯ, ಭಾರತ ಸರ್ಕಾರ, 1959, ಪು.28. 1881ರಲ್ಲಿ ಒಟ್ಟು ಮಹಿಳಾ ಜನಸಂಖ್ಯೆಯಲ್ಲಿ ಶಿಕ್ಷಣ ಪಡೆಯುತ್ತಿದ್ದ ಬಾಲಕಿಯರ ಅನುಪಾತವು 185ಕ್ಕೆ 1 ಆಗಿತ್ತು. ಒಟ್ಟು ಪುರುಷರ ಜನಸಂಖ್ಯೆಯಲ್ಲಿ ಶಿಕ್ಷಣ ಪಡೆಯುತ್ತಿದ್ದ ಬಾಲಕರ ಅನುಪಾತವು 42ಕ್ಕೆ 1 ಆಗಿತ್ತು. ಅದೇ, ಪು. 12.
62. ವಿವಿಧ ಜಾತಿಗಳಲ್ಲಿ ಸಾಕ್ಷರತೆಯ ಪ್ರಮಾಣದಲ್ಲಿ ವಿಪರೀತವಾದ ವ್ಯತ್ಯಾಸಗಳನ್ನು ಕೆಳಕಂಡ ವಾಸ್ತವಾಂಶಗಳಲ್ಲಿ ನೋಡಬಹುದು: 1931ರಲ್ಲಿ 1000 ಜನರಲ್ಲಿ 782 ಜನ ವೈದ್ಯರು, 607 ಜನಮ ಕಾಯಸ್ಥರು, 603 ಜನ ನಾಯರ್ ಪುರುಷರು ಅಕ್ಷರಸ್ಥರಾಗಿದ್ದರು. ಕೇವಲ 11 ಜನ ಭಿಲ್ಲರು ಮತ್ತು 10 ಜನ ಚಮ್ಮಾರರು ಅಕ್ಷರಸ್ಥರಾಗಿದ್ದರು. 10,000 ಪುರುಷರಲ್ಲಿ 5,729 ಜನ ವೈದ್ಯರು ಮತ್ತು 2418 ಜನ ಕಾಯಸ್ಥರು ಇಂಗ್ಲಿಷ್ ಸಾಕ್ಷರರಾಗಿದ್ದರು. ಪ್ರತಿ 10,000 ಪುರುಷರಲ್ಲಿ ಚಮ್ಮಾರರಂತಹ ಜಾತಿಗಳಲ್ಲಿ 3 ಜನ ಮತ್ತು ಭಿಲ್ಲರಲ್ಲಿ ಒಬ್ಬರು. ಇಂಗ್ಲಿಷ್ ಸಾಕ್ಷರರಾಗಿದ್ದರು.
63. ಬಂಗಾಳದಲ್ಲಿ ವೈದ್ಯರು ಮತ್ತು ಸುವರ್ಣಿಕೆಗಳು ಮತ್ತು ಅಗರ್‌ವಾಲರು ಬ್ರಾಹ್ಮಣರನ್ನು ಮೀರಿಸಿದ್ದರು. ಯು.ಪಿ.ಯಲ್ಲಿ ಕಾಯಸ್ಥರು, ಅಗರ್‌ವಾಲರು ಮತ್ತು ಸೈಯಿದರು ಬ್ರಾಹ್ಮಣರನ್ನು ಮೀರಿಸಿದ್ದರು. ವ್ಯಾಪಾರ ಮಾಡುವ ಜಾತಿಯವರು ಯಾವಗಲೂ ಅಧಿಕ ಪುರುಷ ಸಾಕ್ಷರತೆಯನ್ನು ಹೊಂದಿದ್ದರು. ಸೆನ್ಸಸ್ ಆಫ್ ಇಂಡಿಯಾ, 1931, ಸಂಪುಟ-1, ಭಾಗ-1, ಪುಟಗಳು 330-31. ಹಾಗೂ ನೋಡಿ: ಪೂರಕವಾದ ಕೋಷ್ಟಕ 5, ಪುಟಗಳು 342-45.
64. ಅದೇ.

ತೌಲನಿಕ ಶೇಕಡಾವಾರಿನೊಡನೆ ಮುಸ್ಲಿಮ್ ವಿದ್ಯಾರ್ಥಿಗಳು ಮತ್ತು ಜನಸಂಖ್ಯೆ-1927:

| | **ಒಟ್ಟು ಜನಸಂಖ್ಯೆಯೊಡನೆ ಮುಸ್ಲೀಮ್ ಜನಸಂಖ್ಯೆಯ ಅನುಪಾತ** | **ಒಟ್ಟು ವಿದ್ಯಾರ್ಥಿಗಳಲ್ಲಿ ಮುಸ್ಲಿಮ್ ವಿದ್ಯಾರ್ಥಿಗಳ ಅನುಪಾತ** |
|---|---|---|
| ಮದ್ರಾಸ್ | 6.7 | 11.0 |
| ಬಾಂಬೆ | 19.6 | 18.1 |

| | | |
|---|---|---|
| ಬಂಗಾಳ | 54.0 | 51.3 |
| ಯು.ಪಿ. | 14.3 | 18.1 |
| ಪಂಜಾಬ್ | 55.3 | 50.0 |
| ಬಿಹಾರ್ ಮತ್ತು ಒರಿಸ್ಸಾ | 10.9 | 13.1 |
| ಸಿ.ಪಿ. | 4.1 | 9.5 |
| ಅಸ್ಸಾಮ್ | 29.0 | 25.9 |

65. ಅದೇ.
66. ಹಾರ್ಟೋಗ್ ಸಮಿತಿ ವರದಿ, ಪುಟಗಳು. 190-191.
67. ಪೂರ್ವೋಕ್ತ.
68. ಹಾರ್ಟೋಗ್ ಸಮಿತಿ, ಪು.187.

    1931ರಲ್ಲಿ 5 ವರ್ಷ ಮತ್ತು ಮೇಲ್ಪಟ್ಟವರಲ್ಲಿ ಪ್ರತಿ ಸಾವಿರ ಜನಕ್ಕೆ ಸಾಕ್ಷರತೆಯ ಪ್ರಮಾಣ: ಪಾರ್ಸಿಗಳು 791; ಯೆಹೂದಿಗಳು 416, ಜೈನರು 353; ಕ್ರೈಸ್ತರು 279; ಸಿಖ್ಖರು 91; ಹಿಂದೂಗಳು 84; ಮುಸ್ಲಿಮರು 66.

    ಸೆನ್ಸಸ್ ಆಫ್ ಇಂಡಿಯಾ, 1931, ಸಂಪುಟ 1, ಭಾಗ 1, ಪು.329.

69. ಎಸ್.ಇ.ಆರ್. ಭಾಗ 2, ಪುಟಗಳು 362-63.
70. ಅದೇ, ಪುಟಗಳು 312-15.
71. ಅದೇ, ಪುಟಗಳು 329-335.
72. ಅದೇ, ಪುಟಗಳು 335-338.
73. ಎಜುಕೇಷನ್ ಇನ್ ಇಂಡಿಯಾ, 1947-48, ಪುಟಗಳು 143-157.
74. ಎಸ್.ಇ.ಆರ್. ಭಾಗ 1, ಪುಟಗಳು 78, 197.
75. ಎಸ್.ಇ.ಆರ್., ಭಾಗ 2, ಪುಟಗಳು 356-61.
76. ಅದೇ, ಪುಟಗಳು 339-43.
77. ಆಟ್‌ಕಿನ್‌ಸನ್ – ಡಾಸನ್ ಸಮಿತಿ ವರದಿ: ತಾಂತ್ರಿಕ ಶಿಕ್ಷಣ ಸಂಸ್ಥೆಗಳನ್ನು ಹತ್ತಿರ ತರುವುದಕ್ಕೆ ಮತ್ತು ಭಾರತ ಶ್ರಮ ಕಾರ್ಮಿಕರ ಹೆಚ್ಚು ಪ್ರಾಯೋಗಿಕವಾದ ಸಂಬಂಧಗಳಿಗೆ ವಿಚಾರಣೆ, ಕಲ್ಕತ್ತ, 1912.
78. ಇಂಜಿನಿಯರುಗಳ ಇಂಪೀರಿಯಲ್ ಸೇವೆಗಳನ್ನು ಯುರೋಪಿಯನ್ನರಿಗೆ ಮೀಸಲಾಗಿರಿಸಲಾಗಿತ್ತು ಮತ್ತು ಈ ಪ್ರಾಂತೀಯ ಇಂಜಿನಿಯರಿಂಗ್ ಸೇವೆಗೆ 4 ಇಂಜಿನಿಯರಿಂಗ್ ಕಾಲೇಜುಗಳಿಂದ ಪ್ರತಿವರ್ಷ 9 ರಿಂದ 10 ನೇಮಕಾತಿಗಳನ್ನು ಮಾಡಲಾಗುತ್ತಿತ್ತು. ಪ್ರೋಗ್ರೆಸ್ ಆಫ್ ಎಜುಕೇಷನ್ ಇನ್ ಇಂಡಿಯಾ, 1896-97, 1901-02, ಸಂಪುಟ 1, ಪು.249. ರೈಲ್ವೆ ಇಲಾಖೆಯಲ್ಲಿ ಉನ್ನತ ಮತ್ತು ಮಧ್ಯಮ ದರ್ಜೆಯ ಹುದ್ದೆಗಳಲ್ಲಿ ಬಹುತೇಕ ಯೂರೋಪಿಯನ್ನರು ಮತ್ತು ಆಂಗ್ಲೊ ಇಂಡಿಯನ್ನರೇ ಇದ್ದರು. 1913 ರಲ್ಲಿ ಯೂರೋಪಿಯನ್ನರು ಮತ್ತು ಆಂಗ್ಲೊ ಇಂಡಿಯನ್ನರು ಶೇ.90 ರಷ್ಟು ಹುದ್ದೆಗಳನ್ನು ಹಿಡಿದಿದ್ದು ರೂ.200 ಮತ್ತು ಮೇಲ್ಪಟ್ಟು ಸಂಬಳವನ್ನು ಪಡೆಯುತ್ತಿದ್ದರು. ಕಮಿಷನ್ ಆನ್ ಪಬ್ಲಿಕ್ ಸರ್ವೀಸಸ್ ಇನ್ ಇಂಡಿಯಾ, 1916, ಸಂಪುಟ 1, ಪು.24. ನೀರಾವರಿ ಇಲಾಖೆ, ಸರ್ಕಾರಿ ಶಸ್ತ್ರಾಸ್ತ್ರಗಳ ಕಾರ್ಖಾನೆಗಳು, ಅಂಚೆ

ಮತ್ತು ತಂತಿ ಇಲಾಖೆಗಳಲ್ಲಿ ಭಾರತೀಯರ ಪ್ರಮಾಣ ತಪ್ಪಿದ ಅಲ್ಪ ಸಂಖ್ಯೆಗೆ ನೋಡಿ: ಸೆನ್ಸಸ್ ಆಫ್ ಇಂಡಿಯಾ, 1921, ಸಂಪುಟ 1, ಭಾಗ 1, ಪುಟಗಳು 288, 289; ಸೆನ್ಸಸ್ ಆಫ್ ಇಂಡಿಯಾ, 1931, ಸಂಪುಟ 1, ಭಾಗ 1, ಪುಟಗಳು 316-317.

79. ಹತ್ತಿ ವಸ್ತ್ರಗಳು, ಕಬ್ಬಿಣ ಮತ್ತು ಉಕ್ಕನ್ನು ಹೊರತುಪಡಿಸಿ ಬಹುಪಾಲು ಕಾರ್ಖಾನೆಗಳು ಯೂರೋಪಿಯನ್ನರ ಒಡೆತನದಲ್ಲಿಯೇ ಇದ್ದವು. ಅವರು ಉನ್ನತ ಹುದ್ದೆಗಳಿಗೆ ತಮ್ಮ ದೇಶದವರನ್ನೇ ನೇಮಿಸಿಕೊಳ್ಳಲು ಬಯಸುತ್ತಿದ್ದರು. ಕಾನ್‌ಪುರದ ಯೂರೋಪಿಯನ್ ಗಿರಣಿ ಒಡೆಯರು ಮೇಲುಸ್ತುವಾರರಾಗಿ ಯೂರೋಪಿಯನ್ನರನ್ನು ಅಪೇಕ್ಷಿಸುತ್ತಾರೆ ಎಂದು ಯು.ಪಿ.ಯ ಲೆಫ್ಟಿನೆಂಟ್ ಗವರ್ನರ್ ಲ ಟಚ್ ಅವರು ಲಾರ್ಡ್ ಆಂಪ್ಟ್ ಹಿಲ್ ಅವರಿಗೆ ಬರೆದಿದ್ದರು. ಆಂಪ್ಟ್ ಹಿಲ್ ಗೆ ಲ ಟಚ್ 06-06-1904. ಆಂಪ್ಟ್ ಹಿಲ್ ಕಲೆಕ್ಷನ್, ಹಸ್ತಪ್ರತಿಗಳು, ಯೂರೋ, ಇ, 233. ಮದ್ರಾಸ್ ಛೇಂಬರ್ ಆಫ್ ಕಾಮರ್ಸ್ ಮತ್ತು ಅಪ್ಪರ್ ಇಂಡಿಯಾ ಛೇಂಬರ್ ಆಫ್ ಕಾಮರ್ಸ್ನ ಅಭಿಪ್ರಾಯಗಳಿಗೆ ನೋಡಿ: ಪ್ರೋಗ್ರೆಸ್ ಆಫ್ ಎಜುಕೇಷನ್ ಇನ್ ಇಂಡಿಯಾ, 1902-07, ಸಂಪುಟ 1, ಪ್ಯಾರಾಗಳು 590-91.
80. ಟಿಪ್ಪಣಿಗಳು, ಡಿ.ಜಿ. ಹ್ಯಾರಿಸ್, 18-03-1918. ಆವೃತ್ತಿ. ಎ. ಜನವರಿ, 1919, ಪ್ರೊಸೀಡಿಂಗ್ಸ್ 39.
81. ರಿಪೋರ್ಟ್ ಆಫ್ ದಿ ಇಂಡಸ್ಟ್ರಿಯಲ್ ಕಮಿಷನ್, 1916-18, ಸಂಪುಟ 1, ಪು.70. ಇದನ್ನು ನೋಡಿ: ಅಪರ್ಣಾ ಬಸು, ದ ಗ್ರೋತ್ ಆಫ್ ಎಜುಕೇಷನ್ ಅಂಡ್ ಪಾಲಿಟಿಕ್ಸ್ ಇನ್ ಇಂಡಿಯಾ, 1898, 1920, ಓ.ಯು.ಪಿ. 1974, ಪು.90.
82. ಭಾರತ ಸರ್ಕಾರ, ಶಿಕ್ಷಣ ನೀತಿಯ ನಿರ್ಣಯ, 1904.
83. ಇಯರ್ ಬುಕ್ ಆಫ್ ಎಜುಕೇಷನ್, 1938, ಪುಟಗಳು 37-131.
84. ಮಿನಿಟ್ ಬೈದ ಮಾರ್ಕ್ವೆಸ್ ಆಫ್ ಡಾಲ್‌ಹೌಸಿ, 01-04-1850, ಎಸ್.ಇ.ಆರ್. ಭಾಗ 2, ಪುಟಗಳು 56-60.
85. ಇಂಡಿಯನ್ ಎಜುಕೇಷನ್ ಕಮೀಷನ್ (1882), ಪುಟಗಳು 179-82.
86. ಪ್ರೋಗ್ರೆಸ್ ಆಫ್ ಎಜುಕೇಷನ್ ಇನ್ ಇಂಡಿಯಾ, 1887-88, 1891-92, ಸಂಪುಟ 1, ಪು.284.
87. ಸೆನ್ಸಸ್ ಆಫ್ ಇಂಡಿಯಾ, 1921, ಸಂಪುಟ 1, ಪು. 186.